

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING BAGALKOT

Volume : 08 | Issue : 36 | Tuesday 14-10-2025 | E-mail : maruti.b.hosamani76@gmail.com | Page: 4 | Price : Rs. 1/-

## ಅಬಕಾರಿ ಮಾಫಿಯಾ–ವಿರುದ್ಧ ಉಡುಪಿ ದಂಗೆ....!

**ಸಿಹಿ ಕಹಿ ಸುದ್ದಿ,**

**ಉಡುಪಿ :** ಉಡುಪಿ ಜಿಲ್ಲೆಯ ಅಬಕಾರಿ ಇಲಾಖೆಯು ಸಂಪೂರ್ಣವಾಗಿ ಭ್ರಷ್ಟಾಚಾರದ ಹಿಡಿತಕ್ಕೆಸಿಲುಕಿದ್ದು,ಅಧಿಕಾರಿಗಳು ಕಾನೂನುಬಾಹಿರವಾಗಿ ವೈನ್ ಶಾಪ್ ಮತ್ತು ಬಾರ್‌ಗಳನ್ನು ನಡೆಸಲು ಲೈಸೆನ್ಸ್ ನೀಡಿ, ನಂತರ ಆ ಬಾರ್‌ಗಳನ್ನು 'ಕಲೆಕ್ಷನ್ ಟಾರ್ಗೆಟ್' ಆಗಿ ಬಳಸುತ್ತಿದ್ದಾರೆ ಎಂಬುದು ಇದೀಗ ಜಿಲ್ಲೆಯಲ್ಲಿ ಕೇಳಿಬರುತ್ತಿರುವ ಅತ್ಯಂತ ದೊಡ್ಡ ಸತ್ಯವಾಗಿದೆ.




ಅಬಕಾರಿ ಅಧಿಕಾರಿಗಳ ದ್ವಿಮುಖ 'ಹಫ್ತಾ ಮತ್ತು ಟಾರ್ಗೆಟ್' ದಂಧೆ ಉಡುಪಿ ಅಬಕಾರಿ ಅಧಿಕಾರಿಗಳ ವಿರುದ್ಧ ಬಾರ್ ಮಾಲೀಕರು ಮತ್ತು ಸಾರ್ವಜನಿಕರು ಒಟ್ಟಾಗಿ ಎರಡು ಆಯಾಮದ ಗಂಭೀರ ಆರೋಪಗಳನ್ನು ಮಾಡಿದ್ದಾರೆ.

ನಿಯಮ ಉಲ್ಲಂಘನೆಯೇ ಕಲೆಕ್ಷನ್ ಮೂಲ:–

ಪರವಾನಗಿಅಕ್ರಮ,ಅಧಿಕಾರಿಗಳು ಉದ್ದೇಶಪೂರ್ವಕವಾಗಿನಿಯಮ ಉಲ್ಲಂಘಿಸಿರುವ(ಉದಾ:ಶಾಲಾ–ಚರ್ಚ್ ಸಮೀಪದ ಕೆಮ್ಮಣ್ಣು 'ಶಿಕಾ ಬಾರ್') ಬಾರ್‌ಗಳಿಗೆ ಪರವಾನಗಿ ನೀಡುತ್ತಾರೆ.

ಹಫ್ತಾ ವಸೂಲಿ ಕಾಯಕ:–

ಲೈಸೆನ್ಸ್ ನೀಡಿದ ನಂತರ, ಆ ಬಾರ್‌ಗಳನ್ನು 'ಟಾರ್ಗೆಟ್' ಮಾಡಿ ಪ್ರತಿ 15 ದಿನಗಳಿಗೊಮ್ಮೆ ಅಥವಾ ತಿಂಗಳಿಗೊಮ್ಮೆ ಹಫ್ತಾ ವಸೂಲಿ ಮಾಡುವುದು ಅಧಿಕಾರಿಗಳ ಮುಖ್ಯ ಕಾಯಕವಾಗಿದೆ. ಈ ಮೂಲಕ ಅಕ್ರಮ ಬಾರ್‌ಗಳಿಗೆ ರಕ್ಷಣೆ ನೀಡಿ, ತಮ್ಮ ಐಷಾರಾಮ್ಯ ಜೀವನವನ್ನು ನಡೆಸುತ್ತಿದ್ದಾರೆ.

ಲಾಭಕ್ಕಾಗಿ ಬಾರ್ ಮುಚ್ಚುವ ಬೆದರಿಕೆ:–

ಮಾರಾಟ ಗುರಿ ವಿಧಿಸುವುದು: "ಮದ್ಯ ಮಾರಾಟವನ್ನು ಇಂತಿಷ್ಟೇ ಟಾರ್ಗೆಟ್ನಲ್ಲಿ ಮಾರಾಟ ಮಾಡಬೇಕು,"ಇಲ್ಲದಿದ್ದರೆ"ನಮಗೆ ಇಂತಿಷ್ಟು ಮಾರಾಟವಾಗಬೇಕು" ಎಂದು ಅಧಿಕಾರಿಗಳು ಬಾರ್ ಮಾಲೀಕರ ಮೇಲೆ ನೇರ ವಾಗ್ದಾಳಿ ನಡೆಸುತ್ತಾರೆ.

ಬೆದರಿಕೆ ತಂತ್ರ:–

"ನೀವು ಮಾರಾಟ ಮಾಡಲೇಬೇಕು, ಇಲ್ಲದಿದ್ದರೆ ಮದ್ಯದ ಅಂಗಡಿಯನ್ನು ಮುಚ್ಚಿ" ಎಂದು ನೇರವಾಗಿ ಬೆದರಿಕೆ ಹಾಕಿ, ಬಾರ್ ಮಾಲೀಕರನ್ನು ಒತ್ತಡ–ಕ್ಕೆ ಸಿಲುಕಿಸುತ್ತಿದ್ದಾರೆ ಎಂಬುದು ಬೆಳಕಿಗೆ ಬಂದ ವಿಚಾರವಾಗಿದೆ.

ಲಾಭಕ್ಕಾಗಿಬಾರ್‌ಗಳಲ್ಲಿನಡೆಯುವ ಅಕ್ರಮ ಮಾರಾಟ ವಿಧಾನಗಳು

ಅಧಿಕಾರಿಗಳು ವಿಧಿಸುವ ಮಾರಾಟದ ಗುರಿ ಮತ್ತು ಹಫ್ತಾ ಮೊತ್ತವನ್ನು ಸರಿದೂಗಿಸಲು ಹಾಗೂ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳಲುಬಾರ್‌ಮಾಲೀಕರು ಕಾನೂನುಬಾಹಿರವಾಗಿ ಮದ್ಯ ಮಾರಾಟದಲ್ಲಿ ಹಲವು ಅಕ್ರಮ ಮಾರ್ಗಗಳನ್ನು ಅನುಸರಿಸುತ್ತಿದ್ದಾರೆ.

ಅಕ್ರಮ ವಿಧಾನ ಲಾಭದ ಉದ್ದೇಶ ಮತ್ತು ಕಾನೂನು ಬಾಹಿರತೆ ಎಂ.ಆರ್.ಪಿ (MRP) ಉಲ್ಲಂಘನೆ ಮದ್ಯದ ಬಾಟಲಿಯ ಮೇಲೆ ಮುದ್ರಿಸಲಾಗಿರುವ ಗರಿಷ್ಠ ಚಿಲ್ಲರೆ ಬೆಲೆ (MRP) ಗಿಂತ ಹೆಚ್ಚು ಬೆಲೆಗೆ ಮದ್ಯವನ್ನು ಮಾರಾಟ ಮಾಡುವುದು. ಇದು ಗ್ರಾಹಕರನ್ನು ಶೋಷಣೆ ಮಾಡುವ ಸ್ಪಷ್ಟ ಕಾನೂನು ಉಲ್ಲಂಘನೆಯಾಗಿದೆ.

ಕಳಪೆ ಮದ್ಯದ ಮಾರಾಟ ಅಬಕಾರಿ ಅಧಿಕಾರಿಗಳ ಟಾರ್ಗೆಟ್ ಮುಟ್ಟಲು, ಕೆಲವು ಬಾರ್‌ಗಳು ಹೆಚ್ಚು ಲಾಭಾಂಶವಿರುವ ಅಥವಾ ಕಳಪೆ ಗುಣಮಟ್ಟದ ಮದ್ಯವನ್ನು ಗ್ರಾಹಕರಿಗೆ ಮಾರಾಟ ಮಾಡುತ್ತವೆ. ಇದು ಗ್ರಾಹಕರ ಆರೋಗ್ಯಕ್ಕೆ ಮಾರಕವಾಗುತ್ತದೆ.

ಮಿಶ್ರಣ ಕೃತಕ ಮದ್ಯ (Adulteration) ಹೆಚ್ಚು ಲಾಭ ಪಡೆಯುವ ಉದ್ದೇಶದಿಂದ ಕೆಲವೊಮ್ಮೆ ನೀರು ಅಥವಾ ಅಗ್ಗದ ಆಲ್ಕೋಹಾಲ್ ಅಂಶವನ್ನು ಬೆರೆಸಿ (Adulteration) ಕಡಿಮೆ ಗುಣಮಟ್ಟದ ಮದ್ಯವನ್ನು ಗ್ರಾಹಕರಿಗೆ ನೀಡುವುದು.

ಪರವಾನಗಿ ಇಲ್ಲದ ಪ್ರದೇಶದಲ್ಲಿ ಮಾರಾಟ ಲೈಸೆನ್ಸ್ ನೀಡಿದ ಪ್ರದೇಶವನ್ನು ಬಿಟ್ಟು ಬೇರೆ ಅನಧಿಕೃತ ಪ್ರದೇಶಗಳಲ್ಲಿ (ಉದಾಹರಣೆಗೆ, ಪಾರ್ಸೆಲ್ ಕೌಂಟರ್‌ಗಳ ಬದಲು ಬಾರ್ ಹೊರಗೆ) ಮದ್ಯವನ್ನು ಮಾರಾಟ ಮಾಡುವುದು.

ತಕ್ಷಣದ ಆಗ್ರಹ:–

ಸರ್ಕಾರದಿಂದ ಸೂಕ್ತ ಕ್ರಮಕ್ಕೆ ಒತ್ತಾಯ...!

ಉಡುಪಿ ಜಿಲ್ಲೆಯ ಬಾರ್ ಮಾಲೀಕರು, ಸಾರ್ವಜನಿಕರು ಮತ್ತು ಶಿಕ್ಷಣ ಸಂಸ್ಥೆಗಳ ಪರವಾಗಿ ರಾಜ್ಯ ಸರ್ಕಾರಕ್ಕೆ ಈ ಮೂಲಕ ಪ್ರಬಲ ಮತ್ತು ನಿರ್ಣಾಯಕ ಆಗ್ರಹ ಮಾಡಲಾಗಿದೆ.

ಭ್ರಷ್ಟಾಚಾರದ ಬಗ್ಗೆ ಕ್ರಿಮಿನಲ್ ತನಿಖೆ:–

ಬಾರ್ ಮಾಲೀಕರು ಮಾಧ್ಯಮಗಳ ಮುಂದೆ ನೀಡಿರುವ ಹೇಳಿಕೆಗಳನ್ನು ಆಧರಿಸಿ, ಅಬಕಾರಿ ಇಲಾಖೆಯ 'ಹಫ್ತಾ ವಸೂಲಿ' ದಂಧೆಯ ಬಗ್ಗೆ ಉನ್ನತ ಮಟ್ಟದ ಭ್ರಷ್ಟಾಚಾರ ನಿಗ್ರಹ ದಳದ (ACB) ಮೂಲಕ ತಕ್ಷಣವೇ ತನಿಖೆ ನಡೆಸಿ, ಭ್ರಷ್ಟ ಅಧಿಕಾರಿಗಳ ಮೇಲೆ ಎಫ್‌ಐಆರ್ ದಾಖಲಿಸಿ ಬಂಧಿಸಬೇಕು.

ಅಧಿಕಾರಿಗಳ ಅಮಾನತು:–

ಈ ಕಾನೂನುಬಾಹಿರ ಕಾರ್ಯಗಳಲ್ಲಿ ತೊಡಗಿರುವ ಅಬಕಾರಿ ಅಧಿಕಾರಿಗಳನ್ನು ತಕ್ಷಣವೇ ಸೇವೆಯಿಂದ ಅಮಾನತುಗೊಳಿಸಿ ಕಾನೂನು ಕ್ರಮ ಜರುಗಿಸಬೇಕು.

ಲೈಸೆನ್ಸ್ ರದ್ದತಿ:–

ನಿಯಮ ಉಲ್ಲಂಘಿಸಿರುವ ಕೆಮ್ಮಣ್ಣು ಶಿಕಾ ಬಾರ್ ಸೇರಿದಂತೆ ಉಡುಪಿಯಲ್ಲಿರುವ ಎಲ್ಲಾ ಅನಧಿಕೃತ ವೈನ್ ಶಾಪ್ಗಳ ಪರವಾನಗಿಯನ್ನು ಕೂಡಲೇ ರದ್ದು ಗೊಳಿಸಿ (Cancellation), ಅವುಗಳನ್ನು ತೆರವು ಗೊಳಿಸಬೇಕು.

ರಾಜ್ಯಕ್ಕೆ ಪ್ರಶ್ನೆ:–

ಇಂತಹ ಗಂಭೀರ ಭ್ರಷ್ಟಾಚಾರ ನಡೆಯುತ್ತಿದ್ದರೂ, ಅಧಿಕಾರಿಗಳು ಕೇವಲ ತಮ್ಮ ಲಾಭಕ್ಕಾಗಿ ಕಾನೂನುಬಾಹಿರ ಬಾರ್‌ಗಳಿಗೆ ಅನುಮತಿ ನೀಡಿ, ಸಾರ್ವಜನಿಕರ ಜೀವ ಮತ್ತು ಮಕ್ಕಳ ಭವಿಷ್ಯವನ್ನು ಅಪಾಯಕ್ಕೆತಳ್ಳುತ್ತಿದ್ದಾರೆ. ಸರ್ಕಾರ ಈ ಅಬಕಾರಿ ಮಾಫಿಯಾ ವಿರುದ್ಧ ಯಾವಾಗ ಕಠಿಣ ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ಇಡೀ ರಾಜ್ಯ ಗಂಭೀರವಾಗಿ ನೋಡುತ್ತಿದೆ.

**ವರದಿ:**
**ಆರತಿ.ಗಿಳಿಯಾರು.**
**ಉಡುಪಿ**

## ಮಾನ್ವಿಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕ – ಸಂಘದಿಂದ ಪಥ ಸಂಚಲನ



**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಪಟ್ಟಣದ ಟಿ.ಎ.ಪಿ.ಸಿ.ಎಂ.ಎಸ್ ಆವರಣದಿಂದ ಪ್ರಮುಖ ವೃತ್ತಗಳ ಮೂಲಕ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪದಾಧಿಕಾರಿಗಳು ಗಣವೇಶ ಧರಿಸಿ ಪಥ ಸಂಚಲನ ನಡೆಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ಸಂಘದ ಶತಾಬ್ಧಿ ಅಂಗವಾಗಿ ನಡೆದ ಪಥ ಸಂಚಲನಕ್ಕೆ ಕಲ್ಮಠ ಸ್ವಾಮೀಜಿ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಮಾಜಿ ಶಾಸಕ ಗಂಗಾಧರ ನಾಯಕ ಸೇರಿದಂತೆ ಪ್ರಮುಖ ಮುಖಂಡರು ಇದ್ದರು.

ಪಟ್ಟಣದವಿವಿಧವಾರ್ಡಗಳಲ್ಲಿನಡೆದಪಥಸಂಚಲನದಮಾರ್ಗದುದ್ದಕ್ಕೂ ಹಾಗೂ ಪ್ರತಿ ಮನೆಗಳ ಮುಂದೆ ಮಹಿಳೆಯರು ರಂಗೋಲಿಗಳನ್ನು ಬಿಡಿಸಿ ಭಾಗವಧ್ವಜ ಹಾಗೂ ಗಣವೇಶಧಾರಿ ಸ್ವಯಂ ಸೇವಕರನ್ನು ಸ್ವಾಗತಿಸಿ ಪುಷ್ಪರ್ಚಾನೆ ಮಾಡಿ ಗೌರವಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ**

## ರಸ್ತೆಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ: ಶಾಸಕ ಗುಡಗುಂಟಿ

**ಜಮಖಂಡಿ :** ನಗರದ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಅನುದಾನ ಬಿಡುಗಡೆ ಮಾಡಿದ್ದು 4–5 ತಿಂಗಳಲ್ಲಿ ಎಲ್ಲ ಪ್ರಮುಖ ರಸ್ತೆಗಳ ಅಭಿವೃದ್ಧಿಯಾಗಲಿದೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು. ಸೋಮವಾರ ಸಂಜೆ ನಗರದ ಮೋರೆ ಪ್ಲಾಟ್ನಲ್ಲಿ ನಗರೋತ್ಥಾನ ಹಂತ 4 ರ ಯೋಜನೆ ಅಡಿಯಲ್ಲಿ ಕೈಗೊಳ್ಳಲಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಸರ್ಕಾರದಿಂದ25ಕೋಟಿರೂ.ಗಳ ಅನುದಾನ ಬಿಡುಗಡೆಯಾಗಿದ್ದು ಲೋಕೋಪಯೋಗಿ ಇಲಾಖೆ, ನಗರಸಭೆ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಮಾನವಾಗಿ ಅನುದಾನ ನೀಡಲಾಗಿದೆ. ಇದರಿಂದ ನಗರದ ಪ್ರಮುಖ ರಸ್ತೆಗಳು, ಗ್ರಾಮಾಂತರ ಪ್ರದೇಶದ ಸಾವಳಗಿ, ಗೋಠೆ, ತೊದಲಬಾಗಿ ಮುಂತಾದ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ.

ಸುಮಾರು ಐದು ತಿಂಗಳುಗಳ ಅವಧಿಯಲ್ಲಿ ಎಲ್ಲ ರಸ್ತೆಗಳು ಅಭಿವೃದ್ಧಿಯಾಗಲಿವೆ ಎಂದು ತಿಳಿಸಿದರು.

ಜಮಖಂಡಿ ನಗರ ವೇಗವಾಗಿ ಬೆಳೆಯುತ್ತಿದ್ದು, ಜನಸಂಖ್ಯೆಗೆ ಅನುಗುಣವಾಗಿ ಅಭಿವೃದ್ಧಿ ಕಾಮಗಾರಿಗಳು ಆಗಬೇಕಿದೆ. ಅದಕ್ಕಾಗಿ ಸಂಬಂಧ ಪಟ್ಟ ಇಲಾಖೆಯ ಸಚಿವರಿಗೆ ಮನವ–ರಿಕೆ ಮಾಡಿ ಕೊಡಲಾಗಿದೆ ಎಂದು ತಿಳಿಸಿದರು.

ನಗರೋತ್ಥಾನ ಹಂತ 4 ಯೋಜನೆ ಅಡಿ ವಾರ್ಡ ನಂ. 31 ಹುಡ್ಕೊ ಕಾಲನಿಯಲ್ಲಿ ಡಾಂಬರ ರಸ್ತೆ ನಿರ್ಮಾಣ, ಅಂಗವಿಕಲ ಸ್ನೇಹಿ ಉದ್ಯಾನವನ ಅಭಿವೃದ್ಧಿ, ವಾರ್ಡ 30 ರ ಟೀಚರ್ಸ್ ಕಾಲನಿಯ ಉದ್ಯಾನವನ ಅಭಿವೃದ್ಧಿ, ವಾರ್ಡ 1 ಉದ್ಯಾನವನ ಅಭಿವೃದ್ಧಿ, ವಾರ್ಡ 3 ರ ಸಮುದಾಯ ಭವನಕ್ಕೆ ಕಬ್ಬಿಣದ ಮೇಲ್ಚಾವಣಿ ನಿರ್ಮಾಣ, ವಾರ್ಡ 7 ಕತಾಟೆ ಬಡಾವಣೆಯಲ್ಲಿ ಅಂಗವಿಕಲ ಸ್ನೇಹಿ ಉದ್ಯಾನವನ ಅಭಿವೃದ್ಧಿ, ನಗರದ ದೇಸಾಯಿ ವೃತ್ತದಿಂದ ದೀಪದ ರಸ್ತೆಯ ಮಧ್ಯದಲ್ಲಿ ಅಲಂಕಾರಿಕ ವಿದ್ಯುತ್ದೀಪ ಅಳವಡಿಕೆ, ವಾರ್ಡ 15 ರಲ್ಲಿ ಭಕ್ತ ಕನಕದಾಸ ಸಮುದಾಯ ಭವನದ ಎದುರಿನ ರಸ್ತೆಗೆ ಫೇವರ್ಸ ಅಳವಡಿಸುವ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇ–ರಿಸಲಾಗಿದೆ. ಸುಮಾರು 275.25 ಲಕ್ಷ ರೂ. ಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯಲಿವೆ ಎಂದು ಹೇಳಿದರು.

ನಗರಸಭೆ ಅಧ್ಯಕ್ಷ ಈಶ್ವರ ವಾಳೆಣ್ಣವರ, ಪೌರಾಯುಕ್ತ ಜ್ಯೋತಿ ಗಿರೀಶ, ನಗರಸಭೆ ಸದಸ್ಯ ಕುಶಾಲ ವಾಘಮೋರೆ, ಮುಖಂಡರಾದ ಅಜಯ ಕಡಪಟ್ಟಿ ರಾಜಾಸಾಬ ಕಡಕೋಳ, ಶ್ರೀಧರ ಕಂಬಿ, ವಿನಾಯಕ ಪವಾರ, ರಾಜು ತಳಗಿಹಾಳ, ರಾಜು ಚಿಕನಾಳ, ಪರಶುರಾಮ ವಾಳೆಣ್ಣವರ, ಮೋಹನ ಇಂಗಳೆ, ನಾನಾ ಮೋರೆ, ಮುಂತಾದವರು ಹಾಜರಿದ್ದರು.

## ಆಯ್ಕೆ



**ರಬಕವಿ–ಬನಹಟ್ಟಿ :** ದೊಡ್ಡ ಬಳ್ಳಾಪೂರದಲ್ಲಿ ಜರುಗುವ ವಿಶ್ವದಾಖಲೆಯ ರಾಜ್ಯಮಟ್ಟದ ಪ್ರಥಮ ಟೆಲಿಸ್ಕೋಪ್ ತರಬೇತಿಯಲ್ಲಿ 'ನಾನೂ ವಿಜ್ಞಾನಿ–2025' ಟೆಲಿಸ್ಕೋಪ್ ತಯಾರಿಕಾ ತರಬೇತಿಯಲ್ಲಿ ಬನಹಟ್ಟಿಯ ಚಿದಾನಂದ ಸಂಜಯ ಜವಳಗಿ ಆಯ್ಕೆಗೊಂಡಿದ್ದಾನೆ.

## ಶಿಕ್ಷಣದಿಂದ ದೇಶದ ಅಭಿವೃದ್ಧಿ ಸಾಧ್ಯ




**ರಬಕವಿ :** ಶಿಕ್ಷಣದಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ರಬಕವಿ – ಬನಹಟ್ಟಿ ತಾಲ್ಲೂಕಿನಲ್ಲಿ ಶೈಕ್ಷಣಿಕ ಅಭಿವೃದ್ಧಿಗೆಸದಾಬದ್ಧನಾಗಿದ್ದೇನೆ.ಶೈಕ್ಷಣಿಕವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ಸಮಸ್ಯೆಗಳಿದ್ದರೂ ತನ್ನ ಗಮನಕ್ಕೆ ತರಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಇತ್ತೀಚೆಗೆ ರಬಕವಿಯ ವಿದ್ಯಾ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನ ಶಾಲಾ ವರ್ಗ ಕೋಣೆಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಸರ್ಕಾರ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗಾಗಿ ಹತ್ತಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ವಿದ್ಯಾರ್ಥಿಗಳು ಕೂಡಾ ಇವುಗಳ ಸದ್ಬಳಕೆ ಮಾಡಿಕೊಳ್ಳಬೇಕು. ಶಿಕ್ಷಕರು ಕೂಡಾ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕು. ಕ್ಷೇತ್ರದಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ಇದೆ ಎಂದು ತಿಳಿಸಿದರು.

ಶಿವಾನಂದ ತಂಗಡಿ, ಮಾರುತಿ ಗಾಡಿವಡ್ಡರ, ಧರೆಪ್ಪ ಉಳ್ಳಾಗಡ್ಡಿ, ಮಹಾದೇವ ಕೋಟ್ಯಾಳ, ಬಸು ಮನ್ನಿ, ಸವಿತಾ ಹೊಸೂರ,

ಶಿಕ್ಷಣ ಇಲಾಖೆಯ ಅಧಿಕಾರಿಗಳಾದ ಬಿ.ಎಂ. ಹಳೆಮನಿ, ಡಬ್ಲ್ಯು. ವೈ. ಭಜಂತ್ರಿ,

ಮಲ್ಲಿಕಾರ್ಜುನ ಗಡೆನ್ನವರ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

## ಯಾವ ಜಂಟಿ ಸಮೀಕ್ಷೆ ಮಾಡುವುದು ಅವಶ್ಯಕತೆ ಇಲ್ಲಾ ಪ್ರತಿ ಎಕರೆಗೆ ರೂ. 50,000 ಪರಿಹಾರ ಕೊಡುವಂತೆ – ರೈತರಿಂದ ಒಕ್ಕೊರಲಿನಿಂದ ಆಗ್ರಹ

**ಸಿಹಿ ಕಹಿ ಸುದ್ದಿ,**

**ತಾಳಿಕೋಟೆ :** ಕಳೆದ ಐದು ತಿಂಗಳಿಂದ ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕಿನಪ್ರತಿಹಳ್ಳಿಯಲ್ಲಿಸುರಿಯುತ್ತಿರುವ ವಿಪರೀತ ಮಳೆಯಿಂದಾಗಿ ಎಲ್ಲಾ ಬೆಳೆಗಳು ಸಂಪೂರ್ಣ ನೀರಲ್ಲಿ ನಿಂತು ಹಾಳಾಗಿವೆ.



ಜಂಟಿ ಸಮೀಕ್ಷೆಯ ನೆಪದಲ್ಲಿ ಯಾವುದೇ ಸಮಯವನ್ನುಹಾಳು ಮಾಡದೆ ತಾಲೂಕಿನ ಪ್ರತಿಯೊಂದು ಗ್ರಾಮದ ಪ್ರತಿಯೊಬ್ಬ ರೈತರಿಗೂ ಒಣ ಬೇಸಾಯಕ್ಕೆ 50,000 ಹಾಗೂ ನೀರಾವರಿ ಭೂಮಿಗೆ ಒಂದು ಲಕ್ಷ ರೂಪಾಯಿ ಹಾಗೆ ಬಹು ವಾರ್ಷಿಕ ಬೆಳೆಗಳಿಗೆ 2 ?ಲಕ್ಷ ಪರಿಹಾರವನ್ನು ಕೊಡಬೇಕೆಂದು ಈ ಮೂಲಕ ಜಿಲ್ಲಾಡಳಿತಕ್ಕೆ ಹಾಗೂ ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ ಎಂದು ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಆಗ್ರಹ ಮಾಡಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ತಾಳಿಕೋಟೆ ತಾಲೂಕು ದಂಡಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ ಅವರು ಮಾತನಾಡಿದರು.

ವಿಪರೀತ ಮಳೆಯಿಂದಾಗಿ ತಾಲೂಕಿನ ಕೃಷಿ ಬೆಳೆಗಳಾದ ತೊಗರಿ ಹತ್ತಿ ಮೆಕ್ಕೆಜೋಳ ಸಜ್ಜಿ ಸೇರಿದಂತೆ ಎಲ್ಲಾ ಬೆಳೆಗಳು ಹಾಳಾಗಿವೆ. ದ್ರಾಕ್ಷಿ ದಾಳಿಂಬ್ರಿ ಲಿಂಬೆ, ಬಾಳೆ ಸೇರಿದಂತೆ ಎಲ್ಲಾ ಬೆಳೆಗಳು ನೀರಲ್ಲಿ ನಿಂತು ಹಾಳಾಗಿವೆ ಆದ್ದರಿಂದ ಯಾವುದೇ ಜಂಟಿ ಸಮೀಕ್ಷೆ ವೈಮಾನಿಕ ಸಮೀಕ್ಷೆ ಎಂದು ನೆಪ ಹೇಳದೆ 15 ದಿನದ ಒಳಗಾಗಿ ಜಿಲ್ಲೆಯ ಎಲ್ಲರಿಗೂ ಪರಿಹಾರ ಕೊಡಲೇ ಬೇಕೆಂದು ಒತ್ತಾಯ ಮಾಡಲಾಯಿತು.

ಎಲ್ಲಾ ಬೆಳೆಗಳು ಕೂಡ ನಷ್ಟ ಗೊಂಡಿರುವ ಹಿನ್ನೆಲೆಯಲ್ಲಿ ಯಾರಿಗೂ ತಾರತಮ್ಯ ಮಾಡದೆ ಎಲ್ಲರಿಗೂ ನಷ್ಟದ ಪರಿಹಾರವನ್ನು ಹಾಕಬೇಕು ಅದೇ ರೀತಿಯಾಗಿ ಫಸಲು ಭೀಮಾ ಯೋಜನೆಯ ವಿಮೇವೂ ಕೂಡ ಆದಷ್ಟು ಬೇಗನೆ ಕೊಡ ಬೇಕೆಂದರು

ತಾಲೂಕ ಅಧ್ಯಕ್ಷರಾದ ಶ್ರೀಶೈಲ್ ವಾಲಿಕಾರ ಅವರು ಮಾತ್ನಾಡುತ್ತಾ ಭೀಮೆ, ಕೃಷ್ಣಾ ಹಾಗೂ ದೋಣಿಯ ಪ್ರವಾಹದಿಂದಾಗಿ ಸಾಕಷ್ಟು ರೈತರ ಕೃಷಿ ಭೂಮಿಗಳ ಬೆಳೆಗಳು ಹಾಳಾಗಿರುವ ಜೊತೆಗೆ ಮನೆ ಮಠಗಳು ಕೂಡ ಬಿದ್ದು ಹಲವಾರು ಪ್ರಾಣಿಗಳು ಕೂಡ ನೀರಿನಲ್ಲಿ ಕೊಚ್ಚಿ ಕೊಂಡು ಹೋಗಿವೆ ಇದಕ್ಕೆಲ್ಲಾ ಪರಿಹಾರ ನೀಡಬೇಕೆಂದು ಆಗ್ರಹ ಮಾಡುತ್ತಿದ್ದೇವೆ ಒಂದು ವೇಳೆ ತಡವಾದರೆ ಉಗ್ರ ಹೋರಾಟ ಮಾಡಲಾಗುವುದು ಎಂದರು.

ಮಹಿಳಾ ಘಟಕದ ತಾಲೂಕಾ ಅಧ್ಯಕ್ಷರಾದ ಸುಜಾತಾ ಅವಟಿ ಅವರು ಮಾತನಾಡುತ್ತ ನೆಪ ಮಾತ್ರಕ್ಕೆ ಸಮೀಕ್ಷೆ ಮಾಡಿ ಕಣ್ಣಿಗೆ ಕಾಣಬರುವ ಕೆಲವೇ ರೈತರಿಗೆ ನಷ್ಟಪರಿಹಾರ ಕೊಡುವುದಾಗಿ ವರದಿ ತಯಾರಿಸಿದ್ದೀರಿ ಆದರೆ ತಾಲೂಕಿನ ಎಲ್ಲಾ ಹಳ್ಳಿಯ ರೈತರಿಗೆ ಮಳೆಯಿಂದ ನಷ್ಟವಾಗಿದೆ. ಅವರೆಲ್ಲರಿಗೂ ಮತ್ತೊಮ್ಮೆ ಸಮೀಕ್ಷೆ ಮಾಡಿ ಅವರಿಗೂ ಪರಿಹಾರ ಕೊಡಿ ಎಂದರು.

ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ಅವರು ಈಗಾಗಲೇ ಮೊದಲೇ ಹಂತದ ಡೋಣಿ ಇಂದ ನಷ್ಟ ಗೊಂಡ ರೈತರಿಗೆ ಪರಿಹಾರಕ್ಕೆ ಗುರುತಿಸಲಾಗಿತ್ತು, ಮತ್ತೆ ಇತ್ತೀಚಿಗೆ ಹೆಚ್ಚಿನ ಮಳೆ ಉಂಟಾಗಿ ಅನೇಕ ರೈತರ ಜಮೀನುಗಳಲ್ಲಿ ನೀರು ನಿಂತು ಬೆಳೆ ನಷ್ಟ ಗೊಂಡಿರುವ ಕುರಿತು ಪ್ರಥಮ ವರದಿಯನ್ನು ಆಯಾ ಗ್ರಾಮ ಪಂಚಾಯತ ಅಥವಾ ತಲಾಟಿ ಕಚೇರಿ ಮುಂದೆ ಅಂಟಿಸಲಾಗಿದೆ. ಇನ್ನೂ ಯಾವ ರೈತರು ನಷ್ಟ ಗೊಂಡು ಉಳಿದಿದ್ದರೆ ಅಂಥವರು ದಾಖಲೆಗಳನ್ನು ಕೊಡುವಂತೆ ತಿಳಿಸಿದರು.

ಈ ವೇಳೆ ಬಾಗೇವಾಡಿ ತಾಲೂಕಾ ಅಧ್ಯಕ್ಷರಾದ ಮುದಕಣ್ಣ ಬಾಗೇವಾಡಿ, ನಿಂಗಣ್ಣ ಸುಣದಳ್ಳಿ ಈರಯ್ಯ ಅಲಾಳಮಠ, ಶಿವಶಂಕ್ರಪ್ಪ ಸಜ್ಜನ್, ಲಿಂಗರಾಜ ಮೇಟಿ, ರಮೇಶಗೌಡ ವಡವಡಗಿ, ದೇವರೆಡ್ಡಿ ಬಿರಾದಾರ, ದೇವೀಂದ್ರಪ್ಪಗೌಡ್ ಪಾಟೀಲ್, ಮಹದೇಪ್ಪಾಗೌಡ ಜಲಪುರ್, ದೇವಿಡ್ರಪ್ಪಾಗೌಡ ಕೊನಾಳ, ಸಂಗನಗೌಡ ಬೆಂಡೆಗೊಂದಳ, ಈರಣ್ಣ ಸಿಂಪಿಗೆರೆ, ಮಡಿವಾಳಪ್ಪ ಸಿಂಪಿಗೆರೆ, ಶಿವಾಜಿ ಮೊಪಗಾರ, ಸಿದ್ದಪ್ಪತಳವಾರ್, ಅಪ್ಪಸಾಹೇಬ್ ಸಜ್ಜನ್, ಮುರ್ತುಜ ಹಳ್ಳದಮನಿ. ಮಲ್ಲು ಮುದನೂರ್, ಅಪ್ಪಯ್ಯ ಕಾರಕಳ್ಳಿಮಠ. ಶಿವಶಂಕರಪ್ಪ ಟಕಳಕ್ಕಿ, ಬಸವರಾಜ್ ನಾಟಿಕಾರ್, ಭೀಮಣ್ಣ ಸಜ್ಜನ, ಬೋರಮ್ಮ ಕುಂಬಾರ,

ಸುಧಾ ಮಡ್ಡಿ, ದ್ರಾಕ್ಷಿಯಿಣಿ ಲಿಂಗದಳ್ಳಿ,ವಿ ರೇಣುಕಾ ಹಂಚಾಟೆ, ಲಕ್ಷ್ಮಿ ಬಾಯಿ ಸಜ್ಜನ ಸೇರಿದಂತೆ ನೂರಾರು, ರೈತರು ಪಾಲ್ಗೊಂಡಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನೆಲ್:ಎಮ್.ಬಿ ಮನಗೂಳಿ.ತಾಳಿಕೋಟೆ**

## ಜ್ಯೋತಿ ಮಹಿಳಾ ಮಂಡಳದಿಂದ ಶ್ರೀಗಳಿಗೆ ಸನ್ಮಾನ



**ಜಮಖಂಡಿ :** ನಗರದ ಮುತ್ತಿನಕಂತಿ ಹಿರೇಮಠದಲ್ಲಿ ನಾಡಹಬ್ಬ ದಸರಾ ನಿಮಿತ್ಯ ಶ್ರೀದೇವಿ ಪುರಾಣ ಮತ್ತು ಪ್ರವಚನ ಕಾರ್ಯಕ್ರಮದಲ್ಲಿ ಪ್ರತಿನಿತ್ಯ ಮುನ್ನೂರಕ್ಕೂ ಹೆಚ್ಚು ಮುತ್ತೈದೆ ಮಹಿಳೆಯರಿಗೆ ಉಡಿ ತುಂಬುವ ಸೇವೆಯನ್ನು ಸಲ್ಲಿಸುತ್ತಿರುವ ಜ್ಯೋತಿ ಮಹಿಳಾ ಮಂಡಳದಿಂದ

(ಆಳಗಿ ಪರಿವಾರ) ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳನ್ನು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಜ್ಯೋತಿ ಮಹಿಳಾ ಮಂಡಳದ ಸದಸ್ಯರಾದ ಜ್ಯೋತಿ ಆಳಗಿ, ಗಾಯತ್ರಿ ಶಿವಣಗಿ, ಮಹಾದೇವಿ ಕರಜಗಿ,

ಪಾರ್ವತಿ ಗುರ್ಲಾಪೂರ, ವಿಜಯಲಕ್ಷ್ಮಿ ಶಿವಸಿಂಪಿ, ಜಯಶ್ರೀ ಐಹೊಳ್ಳಿ, ರಾಜಶ್ರೀ ಭಾವಿಕಟ್ಟಿ, ಉಷಾ ಹರಕಂಗಿ, ಗಿರಿಜಾ ಮಳಗುಂಡಿ, ವಿದ್ಯಾ ಸೋಲಾಪುರ, ಶೈಲಾ ಕರಜಗಿ, ಲಲಿತಾ ಶಿವಣಗಿ, ಶ್ರೀದೇವಿ ದೇಸಾಯಿ, ಪೂಜಾ ಮುಧೋಳಮಠ, ಹಿರಿಯರಾದ ಮಹಾದೇವಿ ಆಳಗಿ ಭಾಗವಹಿಸಿದ್ದರು.

# ತೆಲಸ್ಸೆಮಿಯಾ ಕಾಯಿಲೆಯಿಂದ ಬಳಲುತ್ತಿರುವ ಬಾಲಕಿಯರು: ಚಿಕಿತ್ಸೆ ನೆರವಿಗೆ ಮೊರೆ ಹೋದ ಪಾಲಕರು

**ಅಪರೂಪದ ಕಾಯಿಲೆಯಿಂದ ಬಳಲುತ್ತಿದ್ದಾಳೆ ಪುಟ್ಟ ಬಾಲಕಿಯರು | ಬಡತನದಿಂದ ಬಳಲುತ್ತಿರುವ ಕುಟುಂಬಕ್ಕೆ ಮಕ್ಕಳ ಚಿಕಿತ್ಸೆಯದ್ದೇ ಚಿಂತೆ | ನೆರವಿಗೆ ಮೊರೆ ಹೋದ ಕುಟುಂಬ: ವಿಚಿತ್ರ ಕಾಯಿಲೆಯ ಚಿಕಿತ್ಸೆಗೆ ಬೇಕಿದೆ ರೂ. 80 ಲಕ್ಷ**

**ವರದಿ : ಲಾಲಸಾಬ ಸವಾರಗೋಳ**

**ನಿಡಗುಂದಿ :** ಶಾಲೆಯಲ್ಲಿ ಇತರ ಮಕ್ಕಳೊಂದಿಗೆ ಆಟ, ಪಾಠದೊಂದಿಗೆ ಸಂತೋಷದಿಂದ ಕಳೆಯಬೇಕಾದ ಬಾಲಕಿಯರಿಗೆ ವಿಚಿತ್ರ ಕಾಯಿಲೆ ಬಾಸಿದೆ.

ಬಾಲಕಿಯರಿಗೆ ಅಪರೂಪದ ತಲಸ್ಸೇಮಿಯಾ ಮೇಜರ್ ಎಂಬ ರೋಗ ಬಾಸಿದ್ದುಇಡೀ ಕುಟುಂಬವನ್ನೇ ಕಂಗಾಲಾಗಿಸಿದೆ. ಈ ಬಡ ಕುಟುಂಬದ ಪಾಲಕರಿಗೆ ಎರಡು ಬಾಲಕಿಯರ ಚಿಕಿತ್ಸೆ ಕೊಡಿಸುವುದು ಭಾರಿ ಹೊರೆಯಾಗಿದ್ದಲ್ಲದೆ, ದಿನನಿತ್ಯ ಜೀವನ ನಡೆಸಲು ಕಷ್ಟಪಡುವ ಕುಟುಂಬಕ್ಕೆ ಈ ಚಿಕಿತ್ಸಾ ವೆಚ್ಚ ಸಿಡಿಲು ಬಡಿದಂತಾಗಿದೆ.

ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣದ ತುಳಸಾ ಹಾಗೂ ಯಲ್ಲಪ್ಪ ಓಲೇಕಾರ ದಂಪತಿಯ ಇಬ್ಬರು ಹೆಣ್ಣು ಮಕ್ಕಳು, ಪಟ್ಟಣದ 8ನಂ ವಡಾವಣೆ ಶಾಲೆಯಲ್ಲಿ ಶಿಲ್ಪಾ(9 ವರ್ಷ)4 ನೇ ತರಗತಿ ಮತ್ತು ಭಾಗ್ಯ (12 ವರ್ಷ) 7ನೇ ತರಗತಿಯ ವಿದ್ಯಾರ್ಥಿಗಳು ತಲಸ್ಸೇಮಿಯಾ ಮೇಜರ್ ಎಂಬ ವಿಚಿತ್ರ ಕಾಯಿಲೆಯಿಂದ ಬಳಲುತ್ತಿದ್ದಾಳೆ.

ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಯಲ್ಲಿ ಸಾಕಷ್ಟು ಚಿಕಿತ್ಸೆ ನೀಡಲಾಯಿತು.



ಅದಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡಿದ್ದರು.



ಇದರ ಚಿಕಿತ್ಸೆಗಾಗಿ ಮಜ್ಜ ಕಸಿ ಮಾಡುವ ಶಸ್ತ್ರಕ್ರಿಯೆಗೆ ವೈದ್ಯರು ಸೂಚಿಸಿದ್ದಾರೆ. ಈ ಚಿಕಿತ್ಸೆ ಮೂಲಕ ಬಾಲಕಿಯರನ್ನು ಗುಣಪಡಿಸುವ ಭರವಸೆ ನೀಡಿದ್ದಾರೆ.ಇದಕ್ಕಾಗಿ ಸುಮಾರು 80 ಲಕ್ಷ ರೂ. ಖರ್ಚು ತಗುಲಬಹುದು ಎಂದು ಆಸ್ಪತ್ರೆಯ ಅಧಿಕೃತರು ತಿಳಿಸಿದ್ದಾರೆ. ಆದರೆ ಇಷ್ಟು ಮೊತ್ತವನ್ನು ಕೂಡಿಸುವುದೇ ಕಷ್ಟವಾಗಿದೆ.

(Thalassemia) ತೆಲಸ್ಸೆಮಿಯಾ ಎಂದರೆ ಜೀನ್ಗಳಿಂದ ಬರುವ ಒಂದು ರಕ್ತದ ಕಾಯಿಲೆಯಾಗಿದೆ. ಇದು ದೇಹದಲ್ಲಿ ಸಾಮಾನ್ಯ ಹಿಮೋಗ್ಲೋಬಿನ್(ಆಮ್ಲಜನಕವನ್ನುಸಾಗಿಸುವ ಪ್ರೋಟೀನ್) ಉತ್ಪತ್ತಿಯಾಗುವುದನ್ನು ಕಡಿಮೆ ಮಾಡುತ್ತದೆ, ಇದರಿಂದ ಕೆಂಪು ರಕ್ತ ಕಣಗಳ ಕೊರತೆ ಉಂಟಾಗಿ ರಕ್ತಹೀನತೆಯಾಗುತ್ತದೆ. ಈ ರಕ್ತಹೀನತೆಯಿಂದ ಆಯಾಸ ಮತ್ತು ದೌರ್ಬಲ್ಯ ಉಂಟಾಗಬಹುದು, ಮತ್ತು ತೀವ್ರತರವಾದ ಪ್ರಕರಣಗಳಲ್ಲಿ ಇದು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು.

**" ಏನಿದು ಥಲಸೇಮಿಯಾ"**

ದೇಹದ ಎಲ್ಲ ಭಾಗಗಳಿಗೂ ರಕ್ತದೊಂದಿಗೆ ಆಕ್ಸಿಜನ್ ಒದಗಿಸುವುದು ಹೀಮೊಗ್ಲೋಬಿನ್ ಕಾರ್ಯವಾಗಿದೆ. ಆದರೆ, ಥಲಸೇಮಿಯಾ ರೋಗಿಗಳಲ್ಲಿ ರಕ್ತದ ಹೀಮೊಗ್ಲೋಬಿನ್ ಉತ್ಪಾದನೆಯಾಗುವುದಿಲ್ಲ. ಬದಲಾಗಿ ಹೊರಗಿನಿಂದ ಕೆಂಪು ರಕ್ತಕಣಗಳನ್ನು ಒದಗಿಸುವುದು ಅನಿವಾರ್ಯವಾಗುತ್ತದೆ. ಪ್ರತಿ ತಿಂಗಳು ರಕ್ತ ಪೂರೈಕೆ ವಿಳಂಬವಾದರೆ ಮಕ್ಕಳು ಸುಸ್ತಿನಿಂದ ಕುಸಿದು ಬೀಳುವ ಸಾಧ್ಯತೆ ಇರುತ್ತದೆ. ಇದೊಂದು ಅನುವಂಶೀಯ ಕಾಯಿಲೆಯಾಗಿದೆ. ಆದರೆ, ಬದುಕಿನುದ್ದಕ್ಕೂ ತಿಂಗಳಿಗೊಮ್ಮೆ ಹೊರಗಿನಿಂದ ರಕ್ತ ಪಡೆಯುವುದು ಅನಿವಾರ್ಯವಾಗಿದೆ.

ವಿಜಯಪುರ ಜಿಲ್ಲೆಯ ಸಂಸದ ರಮೇಶ ಜಿಗಜಿಣಗಿ ಅವರು 3 ಲಕ್ಷ ಸಹಾಯ ಮಾಡಿದ್ದಾರೆ ಇನ್ನೂ 3 ಲಕ್ಷ ಸಹಾಯ ಮಾಡುವುದಾಗಿ ಹೇಳಿದ್ದಾರೆ. ಆದರೆ ಈ ಚಿಕ್ಕ ಮಕ್ಕಳ ಜೀವ ಉಳಿಸಲು ಜಿಲ್ಲೆಯ ಎಲ್ಲಾ ಪ್ರತಿನಿಧಿಗಳು ಈ ಕುಟುಂಬಕ್ಕೆ ಸಹಾಯಮಾಡಲು ಮುಂದೆ ಬರಬೇಕು ಎಂಬುವುದೆ ನಮ್ಮ ಪತ್ರಿಕೆಯ ಕಳಕಳಿ.

ಬಡ ಕುಟುಂಬವು ಇದೀಗ ನೆರವು ಕೋರಿದ್ದಾರೆ.

ಚಿಕಿತ್ಸೆಗಾಗಿ ಹಣ ಹೊಂದಿಸಲು ಸಮಾಜ ಸೇವಕರಾದ ಕಲ್ಮೇಶ ಕುಬಕಡ್ಡಿ (ಮುಳವಾಡ) ಅವರ ತಂಡ ವಿವಿಧ ಗುಂಪುಗಳಾಗಿ ದಾನಿಗಳ ಸಂಪರ್ಕಕ್ಕೆ ಇಳಿದಿದ್ದಾರೆ. ಸಾಮಾಜಿಕ ತಾಣ, ಪತ್ರಿಕೆ, ನೋಟಿಸ್ ಹಂಚುವಿಕೆ ಸಹಿತ ಹಲವು ರೀತಿಯಲ್ಲಿ ಸಹಾಯಕ್ಕಾಗಿ ಪ್ರಚಾರ ಮಾಡುವ ಮೂಲಕ ಹಣ ಹೊಂದಿಸಲು ಕಾರ್ಯಪ್ರವೃತ್ತರಾಗಿದ್ದಾರೆ. ಮುಂದಿನ ತಿಂಗಳೊಳಗೆ ಹಣ ಹೊಂದಿಸಿ ಬಾಲಕಿಯರಿಗೆ ಚಿಕಿತ್ಸೆ ನೀಡಿ ಜೀವ ಉಳಿಸುವ ಸಾಹಸಕ್ಕೆ ಇಳಿದಿದ್ದಾರೆ.

ಆದ ಕಾರಣ ಯಲ್ಲಪ್ಪ ಓಲೇಕಾರ ಅವರ ಕಡು ಬಡತನದಲ್ಲಿ ಹುಟ್ಟಿ ಜೀವನವನ್ನು ಸಾಗಿಸುತ್ತಿದ್ದಾರೆ. ಆ ಬಡತನ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಯಲ್ಲಪ್ಪ ಓಲೇಕಾರ ಅವರು ವಿನಂತಿ ಮಾಡಿಕೊಂಡಿದ್ದಾರೆ

**ಇವರ ಅಕೌಂಟ್ ನಂಬರ್ :**
*520191042437853
Name: Kasturi Yamanappa Yalli-gutti
Union bank of india
IFSC code: UBINO920975
PhonepeNo:9380856737ಆಗಿರುತ್ತದೆ.

# ಉಚಿತ ನೇತ್ರ ಚಿಕಿತ್ಸೆ, ಕನ್ನಡಕ ವಿತರಣೆ




**ರಬಕವಿ-ಬನಹಟ್ಟಿ :** ಅನ್ನಪೂರ್ಣೇಶ್ವರಿ ಕೈಮಗ್ಗ ನೇಕಾರರ ಸಹಕಾರ ಸಂಘ ಹಾಗೂ ಮಹಾಲಿಂಗಪೂರದ ಪ್ರಗತಿ ವಿದ್ಯುತ್ ನೇಕಾರರ ಸಂಘದಿಂದ ಉಚಿತ ನೇತ್ರ ಚಿಕಿತ್ಸೆ ಹಾಗು ಕನ್ನಡಕ ವಿತರಣೆ ಶಿಬಿರ ಮಂಗಳವಾರ ನಡೆಯಿತು.

ಬನಹಟ್ಟಿಯ ಸದಾಶಿವ ದೇವಸ್ಥಾನದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನೇಕಾರ ಮುಖಂಡ ಶಂಕರ ಜಾಲಿಗಿಡದ, ಗ್ರಾಮೀಣ ಭಾಗಗಳಲ್ಲಿ ಕಣ್ಣಿನ ಸಮಸ್ಯೆಯಿಂದ ಬಳಲುತ್ತಿರುವ ಗ್ರಾಮಸ್ಥರಿಗೆ ಇಂತಹ ಶಿಬಿರಗಳು ವರದಾನವಾಗಿದೆ. ಇದರ ಸದ್ಬಳಕೆಯನ್ನು ಸಮಸ್ತ ನೇಕಾರರು ಸದ್ಬಳಕೆ ಮಾಡಿಕೊಳ್ಳಬೇಕೆಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಿವಾನಂದ ಬುದ್ನಿ ಮಾತನಾಡಿ, ನೇಕಾರಿಕೆಯಲ್ಲಿ ಸೀರೆ ನೇಯ್ಗೆ ಹಾಗು ಎಳೆ ತುಂಬುವ ಕಾಯಕದಲ್ಲಿರುವ ಬಹುತೇಕ ವಯಸ್ಕರಿಗೆ ಕಣ್ಣಿನ ಸಮಸ್ಯೆ ಸಾಮಾನ್ಯವಾಗಿದೆ. ನೇಕಾರ ನಗರದಲ್ಲಿ ಇಂತಹ ಯೋಜನೆ ರೂಪಿಸಿದ್ದಕ್ಕೆ ಅಭಿನಂದಿಸಿದರು.

ವೇದಿಕೆ ಮೇಲೆ ಮಲ್ಲಣ್ಣ ಬಾವಲತ್ತಿ, ಅಶೋಕ ರಾವಳ, ಶ್ರೀಶೈಲ ಹೊನವಾಡ, ಶಂಕರ ಚನಪನ್ನವರ, ಶೇಖರ ಹಕ್ಕಲದಡ್ಡಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ರಾಮಾಯಣ ರಚನೆಯಲ್ಲಿ ಮಹರ್ಷಿ ವಾಲ್ಮೀಕಿ ಅಗ್ರಗಣ್ಯರು-ಉಪನ್ಯಾಸಕ ಬೆಳವಿ

**ಮೂಡಲಗಿ :** ರಾಮಾಯಣ ಗ್ರಂಥ ರಚನೆಯಲ್ಲಿ ಮಹರ್ಷಿ ವಾಲ್ಮೀಕಿ ಅಗ್ರಗಣ್ಯರಾಗಿದ್ದು ಪೂರ್ವಾಶ್ರಮದಲ್ಲಿ ಅವರೊಬ್ಬ ದರೋಡೆಖೋರನಾಗಿದ್ದರು. ನಂತರ ರತ್ನಾಕರ ಮಹರ್ಷಿ ವಾಲ್ಮೀಕಿಂ-ಡಾಗಿ ನಾರದ ಮುನಿಗಳ ಸಂದೇಶದಂತೆ ಪರಿವರ್ತನೆಯಾಗಿ ಮಾನವ ಕುಲದಲ್ಲಿ ಶ್ರೇಷ್ಠತೆಯ ಮೌಲ್ಯಗಳನ್ನು ಹೊಂದಿರುವ ರಾಮನ ಜೀವನದ ಯಶೋಗಾಥ-'ಯನ್ನು ಪರಿಚಯಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದು ರಾಮನಾಮದಲ್ಲಿ ದೇವನಿದ್ದು ಸಾರ್ವಕಾಲಿಕ ಸಾಮಾಜಿಕ ಮೌಲ್ಯಗಳನ್ನು ರಾಮಾಯಣದ 24,000 ಶ್ಲೋಕಗಳ ಮೂಲಕ ಪರಿಚಯಿಸುವಲ್ಲಿ ಮಹರ್ಷಿ ವಾಲ್ಮೀಕಿ ಮನುಕುಲದ ಮಹಾನ್ ವಿದ್ವಾಂಸರಾಗಿದ್ದಾರೆ ಎಂದು ಮೂಡಲಗಿಯ ಆರ್ಡಿಎಸ್ ಪದವಿ ಪೂರ್ವ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ಸಿದ್ಧಾರೂಢ ಬೆಳವಿ ಹೇಳಿದರು. ಪಟ್ಟಣದ ಆರ್.ಡಿ.ಎಸ್. ಕಲಾ,ವಾಣಿಜ್ಯ,ವಿಜ್ಞಾನ, ಸಮಾಜಕಾರ್ಯ ಪದವಿ ಮಹಾವಿದ್ಯಾಲಯ, ಸ್ವತಂತ್ರ ಪದವಿ ಪೂರ್ವಮಹಾವಿದ್ಯಾಲಯಗಳಎನ್.ಎಸ್.




ಎಸ್. ಘಟಕಗಳ ಸಂಯುಕ್ತಾಶ್ರಯದಲಿ ಮಂಗಳವಾರ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಅತಿಥಿಗಳಾಗಿ ಭಾಗವಹಿಸಿದ್ದರು.

ಉಪನ್ಯಾಸಕಿ ಪ್ರಸ್ಕಿಲಾ ಗಸ್ತಿ ಮಾತನಾಡಿ ಪಿತೃವಾಕ್ಯ ಪರಿಪಾಲಕನಾಗಿ ಸತ್ಯ ಮತ್ತು ಧರ್ಮದ ಮೂಲಕ ರಾಜ್ಯವನ್ನು ಆಳ್ವಿಕೆ ಮಾಡಿ ಮಾನವ ಕುಲದಲ್ಲಿ ಸರ್ವಶ್ರೇಷ್ಠತೆಯ ವಿಚಾರಗಳನ್ನು ಪ್ರತಿಪಾದಿಸಿದ ರಾಮನ ಜೀವನದ ತಿರುಳನ್ನು ಹೊಂದಿರುವ ರಾಮಾಯಣ ಎಂಬ ಮಹಾನ್ ಗ್ರಂಥ-'ವನ್ನು ರಚಿಸಿ ಮಾನವ ಕುಲದ ಸೈದ್ಧಾಂತಿಕ ವಿಚಾರಧಾರೆಗಳನ್ನು ಅರ್ಥೈಸಿಕೊಡುವಲ್ಲಿ ಮಹರ್ಷಿ ವಾಲ್ಮೀಕಿಯವರ ಜ್ಞಾನದ ಚಿಂತನೆಯನ್ನು ತಿಳಿಸಿ ಕೊಡುತ್ತದೆ ಎಂದರು.

ಪದವಿ ಕಾಲೇಜಿನ ಪ್ರಾಚಾರ್ಯ ಸತೀಶ ಗೋಟೂರೆ ಮಾತನಾಡುತ್ತಾ ಮಾನವನ ಜೀವನದಲ್ಲಿ ಯಾವುದು ಯೋಗ್ಯವಾದದ್ದು ಎಂದು ಮಹರ್ಷಿ ವಾಲ್ಮೀಕಿ ವಿಚಾರಧಾರೆಗಳಲ್ಲಿ ತಿಳಿದುಕೊಳ್ಳಬಹುದು. ರಾಮಾಯಣ ಒಂದು ಗ್ರಂಥವಲ್ಲ. ಅದು ಮನುಷ್ಯನಲ್ಲಿ ಇರುವ ಕಾಮ ಕ್ರೋಧ ಮದ ಮತ್ಸರಗಳನ್ನು ತ್ಯಜಿಸಿದಾಗ ಸನ್ಮಾರ್ಗಕ್ಕೆ ಕೊಂಡೊಯ್ಯುವ ದಾರಿ ದೀಪವಾಗುವಂತೆ ಪರಿಚಯಿಸಿರುತ್ತಾರೆ. ನಾವೆಲ್ಲರೂ ರಾಮನ ಜೀವನದ ಆದಶ9ಗಳನ್ನು ಅನುಸರಿಸಿ ರಾಮನಂತಹ ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನಿಸೋಣ ಎಂದರು.

ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಶಿವಾನಂದ ಸತ್ತಿಗೇರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡುತ್ತಾ ದರೋಡೆ ಮಾಡುವ ಸ್ವಭಾವ ಹೊಂದಿರುವ ಮೂಲ ವಾಲ್ಮೀಕಿ ನಂತರರಾಮಾಯಣಬರೆಯುವಜ್ಞಾನಾತ್ಮಕ ವ್ಯಕ್ತಿಯಾಗಿ ಪರಿವರ್ತನೆಯಾದ ಘಟನೆಗಳು ಇಂದಿಗೂ ನಮ್ಮ ಅರಿವಿಗೆ ಬರುತ್ತದೆ. ನಾವುಗಳು ಕೆಟ್ಟ ಸ್ವಭಾವಗಳನ್ನು ಬಿಟ್ಟು ವಾಲ್ಮೀಕಿ ಮತ್ತು ರಾಮನ ಸದ್ಭಾವನೆಗಳನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳುವುದು ಅಗತ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಗಮೇಶ ಕುಂಬಾರ, ಸಂತೋಷ ಲಟ್ಟಿ, ಸುಭಾಸ ಮಾಲೋಜಿ, ಗಂಗಾಧರ ಮನ್ನಾಪೂರ, ಎಸ್. ಬಿ. ಸಿದ್ನಾಳ, ಸಂಜೀವ ಮಂಟೂರ, ಮುತ್ತಣ್ಣ ಒಡೆಯರ, ಸುನೀಲ ಸತ್ತಿ, ರಾಜು ಪತ್ತಾರ ಮತ್ತಿತರರು ಹಾಜರಿದ್ದರು. ವೆಂಕಟೇಶ ಹೆಳವರ ಸೊಗಸಾಗಿ ನಿರೂಪಿಸಿದರು. ಸವಿತಾ ಪಡದಲ್ಲಿ ಸ್ವಾಗತಿಸಿದರು. ರವಿ ಕಟಗೇರಿ ವಂದಿಸಿದರು.

# ಬಲ್ಡೋಟಾ ಕಾರ್ಖಾನೆ ವಿಸ್ತರಣೆಗೆ ವಿರೋಧ: ಮುಖ್ಯಮಂತ್ರಿಗೆ ಮನವಿ ಸಲ್ಲಿಕೆ

**ಕೊಪ್ಪಳ :** ಜಿಲ್ಲಾಕೇಂದ್ರದ ಸಮೀಪದಲ್ಲಿ ಬಲ್ಡೋಟಾ ಕಂಪನಿ ತನ್ನ ಉಕ್ಕಿನ ಕಾರ್ಖಾನೆ ವಿಸ್ತರಣೆಗೆ ಮುಂದಾಗಿದ್ದು ಇದಕ್ಕೆ ಅವಕಾಶ ಕೊಡಬಾರದು ಎಂದು ಆಗ್ರಹಿಸಿ ಜಿಲ್ಲಾ ಬಚಾವೊ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆಯ ಜಂಟಿ ಸಮಿತಿ ಪ್ರಮುಖರು ಸೋಮವಾರ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ತಾಲ್ಲೂಕಿನ ಬಸಾಪುರ ಎಂಎಸ್‌ಪಿಎಲ್ ಏರ್ ಸ್ಟ್ರಿಪ್ಟ್ ಹೊರಭಾಗದಲ್ಲಿ ಮನವಿ ಸಲ್ಲಿಸಿ 'ಕಾರ್ಖಾನೆಯ ದೂಳುಬಾಧಿತ 20 ಹಳ್ಳಿಗಳಿಗೆ ಮುಖ್ಯಮಂತ್ರಿ ಖುದ್ದಾಗಿ ಭೇಟಿ ಕೊಡಬೇಕು. ಈಗಿರುವ ಬಲ್ಡೋಟ ಘಟಕದಿಂದ ನಗರದ ಶೇ. 40ರಷ್ಟು ಭಾಗ ಪರಿಸರ ಹಾನಿಯಾಗಿದ್ದು ಜನರ ಆರೋಗ್ಯದ ಹಿತದೃಷ್ಟಿಯಿಂದ ಆ ಘಟಕ ಬಂದ್ ಮಾಡಬೇಕು, ಬಸಾಪುರದ 44.35 ಎಕರೆ ಕೆರೆಯನ್ನು ಸಾರ್ವಜನಿಕರು ಬಳಸಲು ಮುಕ್ತವಾಗಿಡಬೇಕು' ಎಂದು ಮನವಿ ಮಾಡಿದರು.

ಆಗ ಮುಖ್ಯಮಂತ್ರಿ ನಾನು ಇಲ್ಲಿ ಚುನಾವಣೆಗೆ ನಿಂತಿದ್ದೇನೆ, ನನಗೆ ಎಲ್ಲಾ ಗೊತ್ತಿದೆ ಎಂದಾಗ ಶಾಸಕ ರಾಘವೇಂದ್ರ ಹಿಟ್ನಾಳ ಮಧ್ಯಪ್ರವೇಶಿಸ ಗಡಿಬಿಡಿ ಮಾಡಿದರು ಎಂದು ಹೋರಾಟಗಾರರು ಆರೋಪಿಸಿದ್ದಾರೆ.

ಇದಕ್ಕೂ ಮೊದಲು ಅಶೋಕ ವೃತ್ತದಲ್ಲಿ



ವೇದಿಕೆಯ ಬ್ಯಾನರ್ ಹಿಡಿದು ಬಲ್ಡೋಟಾ ತೊಲಗಲಿ, ಕೊಪ್ಪಳ ಉಳಿಯಲಿ, ಮುಖ್ಯಮಂತ್ರಿ ಬಾಧಿತ ಹಳ್ಳಿಗಳಿಗೆ ಭೇಟಿ ನೀಡಬೇಕೆಂದು ಪ್ರತಿಭಟನೆಗೆ ಮುಂದಾಗಿದ್ದರು.

ಜಂಟಿ ಕ್ರಿಯಾ ವೇದಿಕೆಯ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು, ಡಿ.ಎಚ್.ಪೂಜಾರ, ಕೆ.ಬಿ.ಗೋನಾಳ, ಮಹಾಂತೇಶ ಕೊತಬಾಳ, ಶರಣು ಗಡ್ಡಿ, ಕರೀಮ್ ಪಾಷಾ ಗಚ್ಚಿನಮನಿ, ಬಸವರಾಜ ಶೀಲವಂತರ, ಮುದುಕಪ್ಪ ಹೊಸಮನಿ, ಎಸ್.ಎ.ಗಫಾರ್, ಮೂಕಪ್ಪ ಮೇಸ್ತ್ರಿ ಬಸಾಪುರ, ಚನ್ನಬಸಪ್ಪ ಅಪ್ಪಣ್ಣವರ, ಗವಿಸಿದ್ದಪ್ಪ ಹಲಗಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಕರವೇ ಮನವಿ ಸಲ್ಲಿಕೆ: ಬಿಎಸ್‌ಪಿಎಲ್ ಕಾರ್ಖಾನೆ ಸ್ಥಾಪನೆಗೆ ಮಾಡಿಕೊಂಡಿರುವ ಒಪ್ಪಂದ ರದ್ದು ಮಾಡಬೇಕು, ಜಿಲ್ಲೆಯಲ್ಲಿನ ಅಕ್ರಮ ಚಟುವಟಿಕೆಗಳು ಆಡಳಿತ ವ್ಯವಸ್ಥೆಯನ್ನೇ ಅಣಕಿಸುವಂತೆ ನಡೆಯುತ್ತಿದ್ದರೂ ಗಾಢ ನಿದ್ದೆಯಲ್ಲಿರುವ ಜಿಲ್ಲಾಡಳಿತಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ಜಿಲ್ಲಾಧ್ಯಕ್ಷ ಬಿ.ಗಿರೀಶಾನಂದ ಜ್ಞಾನಸುಂದರ ಆಗ್ರಹಿಸಿದರು.


ಕೊಪ್ಪಳ ತಾಲ್ಲೂಕಿನ ಶಿವಪುರ, ಬಂಡಿಹರ್ಲಾಪುರ, ಅಗಳಕೇರಾ, ಬಸಾಪುರ, ಹುಸೇನ್‌ಪುರ, ಹಾಲವರ್ತಿ ಹಾಗೂ ಹೂವಿನಾಳ ಗ್ರಾಮಗಳ ಅರಣ್ಯ ಪ್ರದೇಶದಲ್ಲಿ ಸಂಪತ್ತನ್ನು ಹಾಳು ಮಾಡಿ ಅಕ್ರಮ ಕಲ್ಲು ಮತ್ತು ಮುರಮ್ ಗಣಿಗಾರಿಕೆ ನಡೆಸುತ್ತಿರವವರ ಮೇಲೆ ಕ್ರಮ ಕೈಗೊಂಡು ಸ್ಥಗಿತಗೊಳಿಸಬೇಕು ಎಂದು ಸಂಘಟನೆಯ ಪ್ರಮುಖರಾದ ಹನುಮಂತ ಬೆಸ್ತರ, ಶಿವನಗೌಡ ಪಾಟೀಲ ಹಲಗೇರಿ, ವಿರೇಶ ಮುಂಡಾಸದ, ಕುಮಾರಸ್ವಾಮಿ ನಾಗರಳ್ಳಿ, ಗವಿಸಿದ್ದಪ್ಪ ನಿರಾದಿಡ್ಡಿ, ರಮೇಶ ಹೊಸಳ್ಳಿ ಆಗ್ರಹಿಸಿದರು.

**ಮನವಿ:** ಒಳಮೀಸಲಾತಿ ವರ್ಗೀಕರಣ ಸಮರ್ಪಕವಾಗಿ ಜಾರಿ ಮಾಡಬೇಕು ಎಂದು ಮಾದಿಗ ಜಾತಿ ಉಪಜಾತಿ ಸಂಘಟನೆಗಳ ಜಿಲ್ಲಾ ಒಕ್ಕೂಟದ ವತಿಯಿಂದ ಸಿ.ಎಂ.ಗೆ ಮನವಿ ಕೊಡಲಾಯಿತು.

ರಾಜ್ಯ ಸರ್ಕಾರ ಒಳಮೀಸಲಾತಿ ವರ್ಗೀಕರಣ ಮಾಡಿದ್ದು, ಇದರಲ್ಲಿ ಪರಿಶಿಷ್ಠ ಜಾತಿ ಜನಸಂಖ್ಯೆ ಹಿಂದುಳಿವಿಕೆ ಆಧಾರದ ಮೇಲೆ ನೇರ ನೇಮಕಾತಿ ಸಂದರ್ಭದಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂದ್ರ ಜಾತಿಗಳು ಪ್ರವರ್ಗ ಎ ಪ್ರವರ್ಗ ಬಿ ದಲ್ಲಿ ಸೌಲಭ್ಯ ಪಡೆಯಬಹುದು ಎಂದು ಹೇಳಲಾಗಿದೆ ಇದರಿಂದ ಮಾದಿಗ ಸಮುದಾಯಕ್ಕೆ ಸಂಪೂರ್ಣ ಅನ್ಯಾಯವಾಗುತ್ತದೆ' ಎಂದು ಸಮಾಜದ ಮುಖಂಡರು ಹೇಳಿದರು.

ಮುಖಂಡರಾದ ಗಣೇಶ ಹೊರತಟ್ನಾಳ್, ಸಿದ್ದಪ್ಪಬೇಳೂರು,ನಾಗಲಿಂಗಮಾಳೆಕೊಪ್ಪ, ಸಿದ್ದು ಮಣ್ಣಿನವರ, ಮಾರುತಿ ಬಿಕನಹಳ್ಳಿ, ಮಂಜುನಾಥ ಮುಸಲಾಪುರ, ಸ್ವಾಮಿ ಹಾಲವರ್ತಿ, ಫಕೀರಪ್ಪ ದೊಡ್ಡಮನಿ, ಶಿವಪ್ಪ ತಾಳ ಕನಕಾಪುರ ಇದ್ದರು.

# ಬಸ್ ಹಾಯ್ದು, ಬೈಕ್ ಡಿಕ್ಕಿ ಹೊಡೆದು ಅವಘಡ: ಪಾದಯಾತ್ರೆ ಹೊರಟಿದ್ದ ನಾಲ್ವರ ಸಾವು



**ಕೊಪ್ಪಳ :** ಸೀಗೆ ಹುಣ್ಣಿಮೆ ಅಂಗವಾಗಿ ತಾಲ್ಲೂಕಿನ ಹುಲಿಗಿಯ ಹುಲಿಗೆಮ್ಮ ದೇವಿ ದೇವಸ್ಥಾನಕ್ಕೆ ವಿವಿಧೆಡೆಯಿಂದ ಪಾದಯಾತ್ರೆ ಹೊರಟಿದ್ದ ಭಕ್ತರ ಮೇಲೆ ಒಂದೆಡೆ ಖಾಸಗಿ ಬಸ್ ಹರಿದು ಮತ್ತು ಇನ್ನೊಂದೆಡೆ ಬೈಕ್ ಡಿಕ್ಕಿ ಹೊಡೆದು ಒಟ್ಟು ನಾಲ್ಕು ಜನ ಮೃತಪಟ್ಟಿದ್ದಾರೆ.

ಕೊಪ್ಪಳ ತಾಲ್ಲೂಕಿನ ಕೂಕನಪಳ್ಳಿ ಗ್ರಾಮದ ಬಳಿಯ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಸೋಮವಾರ ರಾತ್ರಿ ಪಾದಯಾತ್ರಿಗಳ ಮೇಲೆ ಬಸ್ ಹರಿದಿದ್ದರಿಂದ ಅನ್ನಪೂರ್ಣ (40), ಪ್ರಕಾಶ್ (25), ಶರಣಪ್ಪ (19) ಎಂಬುವರು ಮೃತಪಟ್ಟಿದ್ದಾರೆ. ನಾಲ್ಕು ಜನರಿಗೆ ಗಾಯಗಳಾಗಿವೆ. ಈ ಘಟನೆಯಲ್ಲಿ ಮೃತಪಟ್ಟವರು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ತಳ್ಳಿಹಾಳ ಗ್ರಾಮದವರು.

ಹುಣ್ಣಿಮೆಗೆ ಎರಡು ದಿನಗಳ ಮೊದಲೇ ಪಾದಯಾತ್ರೆ ಆರಂಭಿಸಿದ್ದ ತಳ್ಳಿಹಾಳ ಗ್ರಾಮದ ಭಕ್ತರು ಮೂರ್ನಾಲ್ಕು ತಾಸು ಕಳೆದಿದ್ದರೆ ಹುಲಿಗಿ ತಲುಪುತ್ತಿದ್ದರು. ಬಸ್ ಹಾಯ್ದ ರಭಸಕ್ಕೆ ಮೂರು ಜನರ ದೇಹಗಳು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿದ್ದವು. ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ, ಗ್ರಾಮೀಣ ಸಿಪಿಐ ಸುರೇಶ ಡಿ. ಭೇಟಿ ನೀಡಿದರು.

ಕುಕನೂರು ತಾಲ್ಲೂಕಿನ ಭಾನಾಪುರದ ಬಳಿ ನಡೆದ ಇನ್ನೊಂದು ಘಟನೆಯಲ್ಲಿ ಪಾದಯಾತ್ರೆ ಹೊರಟಿದ್ದ ಕುಕನೂರಿನ ವೀರೇಶ ಹಳ್ಳಿಕೇರಿ (28) ಎಂಬ ಯುವಕ ಬೈಕ್ ಡಿಕ್ಕಿ ಹೊಡೆದು ಮೃತಪಟ್ಟಿದ್ದಾನೆ. ಇವರ ತಂಡದಲ್ಲಿ ಒಟ್ಟು ಒಂಬತ್ತು ಜನ ಪಾದಯಾತ್ರೆಗೆ ಹೊರಟಿದ್ದರು.

ಪ್ರತಿ ಹುಣ್ಣಿಮೆ, ಮಂಗಳವಾರ ಹಾಗೂ ಶುಕ್ರವಾರದ ದಿನಗಳಂದ ಜಿಲ್ಲೆ ಹಾಗೂ ನೆರೆಯ ಜಿಲ್ಲೆಗಳಿಂದ ಸಾಕಷ್ಟು ಜನ ಪಾದಯಾತ್ರೆ ತೆರಳುವುದು ಸಾಮಾನ್ಯ.

# 'ಗ್ರಾಮಗಳ ಅಭಿವೃದ್ಧಿಗೆ ಸಹಕಾರ ಅಗತ್ಯ'

**ಕುಷ್ಟಗಿ :** ಪರಸ್ಪರ ಸಹಕಾರ, ತ್ಯಾಗ ಮನೋಭಾವನೆ ಆಯಾ ಗ್ರಾಮಗಳ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ ಎಂದು ಇಲ್ಲಿಯ ಪ್ರಧಾನ ಸಿವಿಲ್ ನ್ಯಾಯಾಧೀಶ ಎಂ.ಎಲ್.ಪೂಜೇರಿ ಹೇಳಿದರು.

ದತ್ತು ಪಡೆದಿರುವ ತಾಲ್ಲೂಕಿನ ಜಿ.ಬೆಂಚಮಟ್ಟಿ ಗ್ರಾಮದಲ್ಲಿ ಗಾಂಧಿ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಸ್ವಚ್ಛತಾ ಅಭಿಯಾನ, ಆರೋಗ್ಯ ತಪಾಸಣೆ ಶಿಬಿರ ಇತರೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಮ್ಮ ಊರಿನ ಅಭಿವೃದ್ಧಿ, ಆಗುಹೋಗುಗಳ ಬಗ್ಗೆ ಜನರೇ ಚಿಂತನೆ ನಡೆಸಬೇಕಾಗುತ್ತದೆ. ಭಾರತದ ಹೃದಯ ಹಳ್ಳಿಗಳಲ್ಲಿದೆ ಎಂಬ ಮಹಾತ್ಮಗಾಂಧಿ ಅವರ ಆಶಯ



ಸಾಕಾರಗೊಳಿಸಲು ಮುಂದಾಗಬೇಕು ಎಂದರು.

ಇದೇ ಸಂದರ್ಭದಲ್ಲಿ ಗ್ರಾಮಸ್ಥರು ಹಾಗೂ ಕಾರ್ಯಕ್ರಮಕ್ಕೆ ಆಗಮಿಸಿದ್ದ ನ್ಯಾಯಾಧೀಶರು, ವಿವಿಧ ಅಧಿಕಾರಿಗಳ ಸಾಮಾನ್ಯ ಆರೋಗ್ಯ ತಪಾಸಣೆ ನಡೆಸಲಾಯಿತು. ನಂತರ ಗ್ರಾಮದ ನಾಮಫಲಕ ಅನಾವರಣ, ಸಸಿ ನೆಡುವ ಕಾರ್ಯಕ್ರಮ ನಡೆಸಲಾಯಿತು.

ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರಸಂಘ ಹಾಗೂ ವಿವಿಧ ಇಲಾಖೆಗಳ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಜನರು ಗ್ರಾಮದ ವಿವಿಧ ಬೇಡಿಕೆಗಳ ಬಗ್ಗೆ ಅಧಿಕಾರಿಗಳ ಗಮನಸೆಳೆದರು.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಮಹಾಂತೇಶ ಚೌವಲಗಿ, ತಹಶೀಲ್ದಾರ್ ಅಶೋಕ್ ಶಿಗ್ಗಾಂವಿ, ಗ್ರೇಡ್ 2 ತಹಶೀಲ್ದಾರ್ ರಜನಿಕಾಂತ ಕೆಂಗಾರಿ, ಗ್ರಾ.ಪಂ. ಅಧ್ಯಕ್ಷ ಮಾನಪ್ಪ ತಳವಾರ, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಆನಂದ ಗೋಟೂರು, ನರೇಗಾ ಸಹಾಯಕ ನಿರ್ದೇಶಕ ನಿಂಗನಗೌಡ, ವಕೀಲರ ಸಂಘದ ಅಧ್ಯಕ್ಷ ದೊಡ್ಡನಗೌಡ ಪಾಟೀಲ, ಅಕ್ಷರದಾಸೋಹ ಸಹಾಯಕ ನಿರ್ದೇಶಕ ಸೋಮನಗೌಡ ಪಾಟೀಲ, ಪ್ರಾಥಮಿಕಶಾಲಾಶಿಕ್ಷಕರಸಂಘದ ಅಧ್ಯಕ್ಷ ನಿಂಗಪ್ಪ ಗುನ್ನಾಳ, ಮಾಲಿಂಗಯ್ಯ, ನಾಗಪ್ಪ ಬಿಳಿಯಪ್ಪನವರ, ಎನ್‌ಎಸ್‌ಎಸ್ ಜಿಲ್ಲಾ ನೋಡಲ್ ಅಧಿಕಾರಿ ನಾಗರಾಜ ಹೀರಾ, ಇಲಾಖೆಗಳ ಅಧಿಕಾರಿಗಳು, ಗ್ರಾ. ಪಂ. ಸಿಬ್ಬಂದಿ, ಜಿ.ಬೆಂಚಮಟ್ಟಿ ಗ್ರಾಮದ ಹಿರಿಯರು, ಯುವಕರು, ವಕೀಲರು ಪಾಲ್ಗೊಂಡಿದ್ದರು.

# 'ಶೈಕ್ಷಣಿಕ ಪ್ರಗತಿಗೆ ವಿಶೇಷ ತರಬೇತಿ ಅಗತ್ಯ'

**ಯಲಬುರ್ಗಾ :** 'ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಅವಶ್ಯಕವಾದ ಶಿಕ್ಷಣವು ಕಡ್ಡಾಯವಾಗಿ ದೊರೆಯಬೇಕಾಗಿದೆ.

ಈ ನಿಟ್ಟಿನಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಶ್ರಮಿಸುತ್ತಿವೆ' ಎಂದು ಅನ್ನದಾನೇಶ್ವರ ಶಾಖಾಮಠದ ವಿಶ್ವೇಶ್ವರ ದೇವರು ಸಲಹೆ ನೀಡಿದರು.ತಾಲ್ಲೂಕಿನ ಸಂಗನಾಳ ಗ್ರಾಮದ ಅನ್ನದಾನೇಶ್ವರ ಶಾಖಾಮಠದಲ್ಲಿ 5ರಿಂದ 10ನೇ ತರಗತಿ ವಿದ್ಯಾರ್ಥಿಳಿಗೆ ಉಚಿತ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳಿಗೆ ವಿಶೇಷ ತರಬೇತಿ ಮತ್ತು ವಿವಿಧ ಕೌಶಲಗಳ ಮಾರ್ಗದರ್ಶನ ಅಗತ್ಯವಿದೆ. ವಿವಿಧ ಪರೀಕ್ಷೆಗಳನ್ನು



ಪರಿಣಾಮಕಾರಿಯಾಗಿ ಎದುರಿಸಲು ಬೇಕಾದ ಅಗತ್ಯ ಕ್ರಮಗಳ ಬಗ್ಗೆ ಅನುಭವಿ ಶಿಕ್ಷಕರು ಮಾರ್ಗದರ್ಶನನೀಡುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಂಕ ಪಡೆಯಲು ಸಾಧ್ಯವಾಗುತ್ತದೆ' ಎಂದರು.ಗ್ರಾಮೀಣ ಪ್ರದೇಶದ ಮಕ್ಕಳ ಅನುಕೂಲಕ್ಕಾಗಿ ಶ್ರೀಮಠದಲ್ಲಿ ಈ ವಿಶೇಷ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಪ್ರಯೋಜನ ಪಡೆದುಕೊಳ್ಳಬೇಕು. ಪಾಲಕರು ಪ್ರೋತ್ಸಾಹಿಸಬೇಕು' ಎಂದು ಕಿವಿಮಾತು ಹೇಳಿದರು. ಸಂಪನ್ಮೂಲ ವ್ಯಕ್ತಿ ಪರಮೇಶ ಪತ್ತಾರ ಪ್ರಾಸ್ತವಿಕವಾಗಿ ಮಾತನಾಡಿದರು. ಶಿಕ್ಷಕ ಗಂಗಾಧರ ದಫೇದ, ಹನಮಂತ ಸಿದ್ದರೆಡ್ಡಿ, ದ್ಯಾಮಣ್ಣ ರಾಜೂರು, ಸಂತೋಷ ಅಡುವಳ್ಳಿ ಸೇರಿ ಭಕ್ತರು ಹಾಜರಿದ್ದರು.

# ತೆರಿಗೆ ಪಾಲು | ಕೇಂದ್ರದಿಂದ ನಿರಂತರ ಅನ್ಯಾಯ: ಸಿ.ಎಂ ಸಿದ್ದರಾಮಯ್ಯ ಆಕ್ರೋಶ



**ಕೊಪ್ಪಳ :** 'ತೆರಿಗೆ ಪಾಲು ಹಂಚಿಕೆಯಲ್ಲಿ ಕೇಂದ್ರ ಸರ್ಕಾರದ ನಿರಂತರ ಅನ್ಯಾಯದ ನಡುವೆಯೂ ರಾಜ್ಯ ಸರ್ಕಾರ ಆರ್ಥಿಕವಾಗಿ ಸದೃಢವಾಗಿದೆ. ಈ ಕುರಿತು ಬಹಿರಂಗ ಚರ್ಚೆಗೆ ಬಿಜೆಪಿ ಸಿದ್ಧವಿದೆಯೇ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ಪ್ರಶ್ನಿಸಿದರು.

ಗ್ಯಾರಂಟಿ ಯೋಜನೆಗಳಿಗೆ ಕಳೆದ ಎರಡು ವರ್ಷಗಳಲ್ಲಿ ?1 ಲಕ್ಷ ಕೋಟಿ ಖರ್ಚು ಮಾಡಿಯೂ ಪ್ರತಿ ಜಿಲ್ಲೆಗಳಿಗೂ ಅಭಿವೃದ್ಧಿಗೆ ಅನುದಾನ ನೀಡಲಾ ಗುತ್ತಿದೆ' ಎಂದು ಪ್ರತಿಪಾದಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾಡಳಿತ ನಗರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಒಟ್ಟು ?2,000 ಕೋಟಿ ವೆಚ್ಚದ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ಮತ್ತು ಫಲಾನುಭವಿಗಳಿಗೆ ಸರ್ಕಾರಿ ಸವಲತ್ತು ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸರ್ಕಾರದಲ್ಲಿ ಹಣವಿಲ್ಲ, ಖಜಾನೆ ಖಾಲಿಯಾಗಿದೆ ಎನ್ನುವ ಬಿಜೆಪಿಯವರು ತಮ್ಮ ಅವಧಿಯಲ್ಲಿ ಹಣವಿಲ್ಲದಿದ್ದರೂ ಹೊಸ ಯೋಜನೆಗಳಿಗೆ ಚಾಲನೆ ನೀಡಿ ನಮ್ಮನ್ನು ಸಂಕಷ್ಟಕ್ಕೆ ದೂಡಿದ್ದರು.

ನಾವೀಗ ಆರ್ಥಿಕವಾಗಿ ಸದೃಢವಾಗಿದ್ದೇವೆ. ತಲಾ ಆದಾಯದಲ್ಲಿ ರಾಜ್ಯ ಈಗ ದೇಶದಲ್ಲಿಯೇ ಅಗ್ರಸ್ಥಾನದಲ್ಲಿರುವುದು ಇದಕ್ಕೆ ಸಾಕ್ಷಿ' ಎಂದು ನುಡಿದರು.

ರಾಜ್ಯ ಸರ್ಕಾರದಲ್ಲಿ ಹಣವಿಲ್ಲದಿದ್ದರೆ ಕೊಪ್ಪಳ ಜಿಲ್ಲೆಯಲ್ಲಿ 2000 ಕೋಟಿ ಮೊತ್ತದ ಅಭಿವೃದ್ಧಿ ಕಾರ್ಯ ನಡೆಸಲು ಸಾಧ್ಯವಾಗುತ್ತಿತ್ತೇ ಎಂದು ಪ್ರಶ್ನಿಸಿದರು.

ಈವರೆಗೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ 13 ಸಾವಿರ ಕೋಟಿ ನೀಡಿದ್ದೇನೆ.

ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ರೈತರಿಗೆ 80 ಸಾವಿರ ಕೋಟಿ ಪರಿಹಾರ ಒದಗಿಸಿದ್ದೇನೆ. ಬಿಜೆಪಿಯವರು ನಿತ್ಯ ಹೇಳುವ ಸುಳ್ಳುಗಳಿಗೆ ರಾಜ್ಯದ ಜನ ತಮ್ಮ ಬುದ್ಧಿ ಒತ್ತೆ ಇಡಬಾರದು' ಎಂದು ಮನವಿ ಮಾಡಿದರು.

ಗ್ಯಾರಂಟಿ ಯೋಜನೆಗಳಿಂದ ಜನರಲ್ಲಿ ಕೊಳ್ಳುವ ಶಕ್ತಿ ಹೆಚ್ಚಾಗಿ ರಾಜ್ಯ ಆರ್ಥಿಕ ಪ್ರಗತಿ ಕಂಡಿದೆ ಎಂದು ಅವರು ಹೇಳಿದರು.

# ಭಗತ್ ಸಿಂಗ್ ಜನ್ಮದಿನ ಆಚರಣೆ




**ಕಾರಟಗಿ :** ತಾಲ್ಲೂಕಿನ ಉಳೇನೂರು ಗ್ರಾಮದಲ್ಲಿ ಎಐಡಿಎಸ್‌ಒ ಹಾಗೂ ಭಗತ್ ಸಿಂಗ್ ಸೇನಾ ಸಮಿತಿ ನೇತೃತ್ವದಲ್ಲಿ ಕ್ರಾಂತಿಕಾರಿ ಭಗತ್ ಸಿಂಗ್ ಜನ್ಮದಿನವನ್ನು ಈಚೆಗೆ ಆಚರಿಸಲಾಯಿತು.

ಎಐಡಿಎಸ್‌ಒ ಜಿಲ್ಲಾ ಸಂಚಾಲಕ ಗಂಗರಾಜ ಅಳ್ಳಳ್ಳಿ ಮಾತನಾಡಿ, 'ಭಗತ್ ಸಿಂಗ್ ತಮ್ಮ 23ನೇ ವಯಸ್ಸಿನಲ್ಲಿ, ಇಂಕ್ವಿಲಾಬ್ ಜಿಂದಾಬಾದ್ ಎಂಬ ಘೋಷಣೆಯ ಮೂಲಕ ಸುಖದೇವ್ ಮತ್ತು ರಾಜಗುರು ಅವರೊಂದಿಗೆ ಹುತಾತ್ಮರಾದರು. ಭಗತ್ ಸಿಂಗ್‌ರ ಸ್ವಾತಂತ್ರ್ಯ ಚಳವಳಿಯನ್ನು ಹತ್ತಿಕ್ಕಲು ಬ್ರಿಟಿಷರು ನಡೆಸಿದ ಮರಣ ದಂಡನೆಗೆ ಹೆದರಲಿಲ್ಲ' ಎಂದರು.

ಎಐಡಿಎಸ್‌ಒ ಸ್ಥಳೀಯ ಸಮಿತಿ ಮುಖಂಡರಾದ ದೊಡ್ಡಬಸವ, ರಮೇಶ್, ದೇವರಾಜ, ವೀರೇಶ, ಯಮನೂರ, ರಾಮ್, ವಿಜಯಲಕ್ಷ್ಮಿ, ಸರಸ್ವತಿ, ದೇವರಾಜ್, ರಾಮಣ್ಣ, ಲಕ್ಷ್ಮಣ ಪ್ರಮುಖರಾದ ಅಂಜಿನಪ್ಪ, ಬಸವರಾಜಪ್ಪ, ದೇವಪ್ಪ, ದೇವರಾಜ್, ಶರಣಪ್ಪ, ಬಸವರಾಜ್ ಇದ್ದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಯುವಕರು, ಗ್ರಾಮಸ್ಥರು ಪಾಲ್ಗೊಂಡಿದ್ದರು.

# ಕಂಪನಿಗಳಿಂದ ರೈತರಿಗೆ ಮೋಸ: ಆರೋಪ




**ಕುಷ್ಟಗಿ :** ತಾಲ್ಲೂಕು ಸೇರಿದಂತೆ ಜಿಲ್ಲೆಯ ಇತರೆ ತಾಲ್ಲೂಕುಗಳಲ್ಲಿ ಗಾಳಿ ವಿದ್ಯುತ್ ಉತ್ಪಾದನೆ ಕಂಪನಿಗಳು ಸರ್ಕಾರದ ಮಾನದಂಡಗಳಿಗೆ ವಿರುದ್ಧವಾಗಿ ರೈತರಿಗೆ ಕೃಷಿಯೋಗ್ಯ ಜಮೀನುಗಳನ್ನು ಗುತ್ತಿಗೆಗೆ ಪಡೆಯುತ್ತಿದ್ದು ನಿಯಮಗಳನ್ನು ಉಲ್ಲಂಘಿಸುತ್ತಿರುವ ಕಂಪನಿಗಳ ವಿರುದ್ಧ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ.

ಈ ಕುರಿತು ಭಾನುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರೈತರ ಭೂಮಿ ಉಳಿಸುವ ಹೋರಾಟ ಸಮಿತಿ ಪ್ರಮುಖ ಅಬ್ದುಲ್ ನಯೀಮ್ ಇತರೆ ರೈತರು, '29 ವರ್ಷಗಳವರೆಗೆ ಜಮೀನನ್ನು ಗುತ್ತಿಗೆ ಪಡೆಯುವ ಒಪ್ಪಂದ ಮಾಡಿಕೊಳ್ಳುತ್ತಿದ್ದು ಆಂಗ್ಲ ಭಾಷೆಯಲ್ಲಿರುವ ಒಪ್ಪಂದದಲ್ಲಿ ಏನಿದೆ ಎಂಬುದು ರೈತರಿಗೆ ಅರ್ಥವಾಗುವುದಿಲ್ಲ.

ಕಂಪನಿಗಳವರು ಮತ್ತು ಮಧ್ಯವರ್ತಿಗಳು ಅಮಾಯಕ, ಮುಗ್ಧ ರೈತರನ್ನು ಬಲಿಪಶು ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

ಸರ್ಕಾರದ ನಿಯಮಗಳ ಪ್ರಕಾರ ವಿಂಡ್‌ಪವರ್ ಘಟಕ ಸ್ಥಾಪನೆಗೆ ಕೇವಲ 3.20 ಎಕರೆ, ಗುಂಟೆ ಜಮೀನು ಸ್ವಾಧೀನ ಪಡೆದುಕೊಳ್ಳಬೇಕು.

ಆದರೆ ವಾಸ್ತವದಲ್ಲಿ ಕಂಪನಿಗಳು ತಲಾ ಘಟಕಕ್ಕೆ ಐದಾರು ಎಕರೆ ಜಮೀನನ್ನು ಪಡೆಯುತ್ತಾರೆ. ಅದರಲ್ಲಿರೂ8–10ಲಕ್ಷಬೆಲೆಯಲ್ಲಿ ಒಂದು ಎಕರೆ ಮಾತ್ರ ಖರೀದಿ ಮಾಡಿದರೆ ಉಳಿದ ಜಮೀನನ್ನು ಲೀಸ್ ಪಡೆಯಲಾಗುತ್ತದೆ.

ಅಲ್ಲದೆ ಕೇವಲ ಎರಡು ವರ್ಷ ಮಾತ್ರ ಲೀಸ್ ಪಡೆಯುವಂತಿದ್ದರೂ 29 ವರ್ಷಗಳವರೆಗೆ ಒಪ್ಪಂದ ಮಾಡಿಕೊಳ್ಳುತ್ತಿದ್ದಾರೆ.

ಇದು ಅರ್ಥವಾಗದೆ ರೈತರು ಮೋಸ ಹೋಗುತ್ತಿದ್ದರೆ ಅಧಿಕಾರಿಗಳು, ಹಳ್ಳಿ ಹಳ್ಳಿಗಳಲ್ಲಿ ಹುಟ್ಟಿಕೊಂಡಿರುವ ಮಧ್ಯವರ್ತಿಗಳು ಕಂಪನಿಗಳೊಂದಿಗೆ ಶಾಮೀಲಾಗಿ ರೈತರಿಗೆ ವ್ಯವಸ್ಥಿತ ರೀತಿಯಲ್ಲಿ ಮೋಸ ಮಾಡುತ್ತಿದ್ದಾರೆ' ಎಂದು ದೂರಿದರು.

ಮೂರು ದಶಕಗಳವರೆಗೆ ರೈತರ ಜಮೀನುಗಳನ್ನು ಗುತ್ತಿಗೆ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಆದರೆ ಅವಧಿ ಮುಗಿದ ನಂತರ ಜಮೀನನ್ನು ಹೇಗೆ ಇರುತ್ತದೆ, ಕಂಪನಿಗಳ ಜವಾಬ್ದಾರಿ ಏನು, ಮತ್ತೆ ಸಾಗುವಳಿಗೆ ಭೂಮಿ ಯೋಗ್ಯವಾಗಿರುತ್ತದೆಯೆ ಎಂಬ ಮಾಹಿತಿಗಳನ್ನು ಗೋಪ್ಯವಾಗಿರಿಸಲಾಗಿದೆ.

ಸರ್ವೆ ಕೆಲಸಕ್ಕೆ ರೈತರು ಅರ್ಜಿ ಸಲ್ಲಿಸಿ ಐದಾರು ತಿಂಗಳಾದರೂ ಭೂ ಮಾಪನ ಇಲಾಖೆಯವರು ಕಾಲಿಡುವುದಿಲ್ಲ.

ಆದರೆ ಸರ್ವೆಗೆ ಗಾಳಿ ಯಂತ್ರದ ಕಂಪನಿಗಳು ಸಂಜೆ ಅರ್ಜಿ ಸಲ್ಲಿಸಿದ ಜಮೀನು ಅಳತೆ ಮಾಡಿಕೊಡುವುದಕ್ಕೆ ಬೆಳಿಗ್ಗೆಯೇ ಸರ್ವೆ ಸಿಬ್ಬಂದಿ ಹಾಜರಿರುತ್ತಾರೆ. ಯಾವುದೇ ಆಕ್ಷೇಪವಿಲ್ಲದೆಯೇ ಉಪ ನೋಂದಣಾಧಿಕಾರಿಗಳು ನೋಂದಣಿ ಪ್ರಕ್ರಿಯೆ ಮುಗಿಸುತ್ತಾರೆ.

ಇಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ' ಎಂದು ಆಪಾದಿಸಿದರು.

ರೈತರೊಂದಿಗೆ ಕಂಪನಿಗಳು ಮಾಡಿಕೊಂಡಿರುವ ಒಪ್ಪಂದ ಮತ್ತು ನಿಯಮಗಳನ್ನು ಉಲ್ಲಂಘಿಸಿದ ಕಂಪನಿಗಳಿಗೆ ನೀಡಿದ ಅನಮತಿ ರದ್ದುಪಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಧಿಕಾರಿಗೆ ಸೂಚನೆ ನೀಡಬೇಕು.

ರೈತರ ಜಮೀನುಗಳನ್ನು ಬೇಕಾಬಿಟ್ಟಿಯಾಗಿ ವಶಕ್ಕೆ ಪಡೆಯುವುದಕ್ಕೆ ಕಡಿವಾಣ ಹಾಕಬೇಕು' ಎಂದು ಒತ್ತಾಯಿಸಿದರು.

ವಿವಿಧ ಗ್ರಾಮಗಳ ರೈತರಾದ ಸಂಗಪ್ಪ ಅಳ್ಳಳ್ಳಿ, ಅಮರಪ್ಪ, ಜಗದೀಶ ಗುರಿಕಾರ, ಬಸವರಾಜ, ಶರಣಗೌಡ ಪಾಟೀಲ ಇತರರು ಇದ್ದರು.

# ಲಕ್ಷ್ಮೀ ವೆಂಕಟೇಶ್ವರ ರಥೋತ್ಸವ



**ಅಳವಂಡಿ :** ಸಮೀಪದ ಕವಲೂರು ಗ್ರಾಮದಲ್ಲಿ ಲಕ್ಷ್ಮಿ ವೆಂಕಟೇಶ್ವರ ನೂತನ ರಥೋತ್ಸವ ಈ ಚೆಗೆ ನಡೆಯಿತು.

ಭರಮಪ್ಪನಗರ,ತೋಟಪ್ಪ,ತಿಮ್ಮಣ್ಣ,ಹೊನ್ನಕೇರಪ್ಪ, ಲಕ್ಷ್ಮಣ್ಣ,ಮಹಾಂತೇಶಸಿಂದೋಗಿಮಠ,ಮನೋಹರ ದೇಸಾಯಿ, ಅಪ್ಪಣ್ಣ, ರಾಮಣ್ಣ, ಹನುಮಪ್ಪ ಹಾಗೂ ಮುಖಂಡರು, ಗ್ರಾಮಸ್ಥರು, ಮಹಿಳೆಯರು ಹಾಗೂ ಇತರರು ಇದ್ದರು.

# ಗಂಗಾವತಿ ಡಿವೈಎಸ್‌ಪಿ ವರ್ಗಾವಣೆ

**ಕೊಪ್ಪಳ :** ಜಿಲ್ಲೆಯ ಗಂಗಾವತಿ ಉಪವಿಭಾಗದ ಡಿವೈಎಸ್‌ಪಿ (ಸಿವಿಲ್) ಸಿದ್ದಲಿಂಗಪ್ಪಗೌಡ ಪಾಟೀಲ ಅವರನ್ನು ಹೊಸದಾಗಿ ಸೃಜನೆಯಾದ ಬೆಂಗಳೂರಿನ ಎ.ಎನ್.ಟಿ.ಎಫ್‌ಗೆ ವರ್ಗಾವಣೆ ಮಾಡಿ ಸರ್ಕಾರ ಸೋಮವಾರ ಆದೇಶಿಸಿದೆ. ಕೊಪ್ಪಳದ ಸೈಬರ್ ಕ್ರೈಂನ ಡಿವೈಎಸ್‌ಪಿ ಯಶವಂತಕುಮಾರ್ ಎಸ್.ಬಿ. ಅವರನ್ನು ಮಂಡ್ಯ ಜಿಲ್ಲೆಯ ಮಳವಳ್ಳಿ ಉಪವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆ.

ಪ್ರಸ್ತುದ ಬೀದರ್ ಜಿಲ್ಲೆ ಹುಮನಾಬಾದ್ ಉಪವಿಭಾಗದ ಡಿವೈಎಸ್‌ಪಿಯಾಗಿರುವ ಜಾಯಪ್ಪ ನ್ಯಾಮಗೌಡರ್ ಅವರನ್ನು ಗಂಗಾವತಿಗೆ ವರ್ಗಾಯಿಸಲಾಗಿದೆ.

# ಟಿಪ್ಪು ಸುಲ್ತಾನ್ ಯಂಗ್ ಕಮೀಟಿಯಿಂದ ಗ್ಯಾರವಿ ಶರೀಫ್ ಕಾರ್ಯಕ್ರಮ



**ವಿಜಯಪುರ :** ನಗರದ ಹವೇಲಿ ಗಲ್ಲಿಯ ಹಿಂದುಗಡೆಯ ಲಾಲ್‌ಬಂಗಲೆ ಹತ್ತಿರದ ಟಿಪ್ಪು ಸುಲ್ತಾನ ನಗರದಲ್ಲಿನ ಟಿಪ್ಪು ಸುಲ್ತಾನ್ ಯಂಗ್ ಕಮೀಟಿ ವತಿಯಿಂದ ಗೌಸ್‌ಪಾಕ್ ಮೆಹಬೂಬ ಸುಬಾನಿ ಹಜರತ್ ಅಬ್ದುಲ್ ಖಾದಿರ್ ಜಿಲಾನಿ ರಹಮತುಲ್ಲಾಅಲ್ಲೈ ಗ್ಯಾರವಿ ಶರೀಪ್ ಕಾರ್ಯಕ್ರಮ ಆಚರಿಸಲಾಯಿತು.

ಟಿಪ್ಪು ಸುಲ್ತಾನ್ ಯಂಗ್ ಕಮೀಟಿಯಿಂದ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರುಗಳಾದ ಅಬ್ದುಲ್‌ಹಮೀದ ಮುಶ್ರೀಫ್, ಜಮೀರ್ ಬಕ್ಷಿ, ಮೊಯಿನ್ ಶೇಖ, ಫಯಾಜ ಸಾಸನೂರ, ಅಬ್ದುಲ್‌ಪೀರಾ ಜಮಖಂಡಿ ಸೇರಿದಂತೆ ವಿವಿಧ ಮುಖಂಡರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಕು.ಇಂತೆಜಾರ ಚಿಷ್ತಿ ಹಾಗೂ ಕು.ಅರಮಾನ ಜಾವೀದ ಅವರು ಕವ್ವಾಲಿ ಕಾರ್ಯಕ್ರಮ ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಟಿಪ್ಪು ಸುಲ್ತಾನ್ ಯಂಗ್ ಕಮೀಟಿಯ ಗಫೂರಸಾಬ ಮುಲ್ಲಾ, ದಾದಾಪೀರ ಅಂಕಲಗಿ, ತೌಫಿಕ ಅಮೀನಗಡ, ಆಸೀಫ್ ಕಾಖಂಡಕಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ 50,000 ಪರಿಹಾರ ನೀಡಲು ರಾಜ್ಯ ರೈತ ಸಂಘ ಆಗ್ರಹ



**ವಿಜಯಪುರ:** ಕಳೆದ ಐದು ತಿಂಗಳಿಂದ ವಿಜಯಪುರ ಜಿಲ್ಲೆಯದೇವರಹಿಪ್ಪರಗಿತಾಲೂಕಿನಪ್ರತಿತಾಲೂಕಿನಲ್ಲಿ ಸುರಿಯುತ್ತಿರುವ ವಿಪರೀತ ಮಳೆಯಿಂದಾಗಿ ಎಲ್ಲ ಬೆಳೆಗಳು ಸಂಪೂರ್ಣ ನೀರಲ್ಲಿ ನಿಂತು ಹಾಳಾಗಿವೆ . ಜಂಟಿ ಸಮೀಕ್ಷೆ ನೆಪದಲ್ಲಿ ಯಾವುದೇ ಸಮಯವನ್ನು ಹಾಳು ಮಾಡದೆ ತಾಲೂಕಿನ ಪ್ರತಿಯೊಂದು ಗ್ರಾಮದ ಪ್ರತಿಯೊಬ್ಬ ರೈತರಿಗೂ ಒಣ ಬೇಸಾಯಕ್ಕೆ 50,000 ಹಾಗೂ ನೀರಾವರಿ ಭೂಮಿಗೆ ಒಂದು ಲಕ್ಷ ರೂಪಾಯಿ ಪರಿಹಾರವನ್ನು ಕೊಡಬೇಕೆಂದು ಈ ಮೂಲಕ ಜಿಲ್ಲಾಡಳಿತಕ್ಕೆ ಹಾಗೂ ರಾಜ್ಯ ಸರ್ಕಾರಕ್ಕೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ದೇವರ ಹಿಪ್ಪರಗಿ ತಾಲೂಕು ತಹಸೀಲ್ದಾರ ಪ್ರಕಾಶ ಸಿಂದಗಿ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ ಅವರು ಮಾತನಾಡಿದರು.

ವಿಪರೀತ ಮಳೆಯಿಂದಾಗಿ ತಾಲೂಕಿನ ಕೃಷಿ ಬೆಳೆಗಳಾದ ತೊಗರಿ, ಹತ್ತಿ, ಮೆಕ್ಕೆಜೋಳ, ಸಜ್ಜೆ ಸೇರಿದಂತೆ ಸಮಸ್ತ ಬೆಳೆಗಳು ಹಾಳಾಗಿವೆ. ದ್ರಾಕ್ಷಿ, ದಾಳಿಂಬೆ, ಲಿಂಬೆ, ಬಾಳೆ ಸೇರಿದಂತೆ ಎಲ್ಲ ಬೆಳೆಗಳಲ್ಲಿ ನೀರು ನಿಂತು ಹಾಳಾಗಿ ಆದ್ದರಿಂದ ಯಾವುದೇ ಜಂಟಿ ಸಮೀಕ್ಷೆ, ವೈಮಾನಿಕ ಸಮೀಕ್ಷೆ ಎಂದು ನೆಪ ಹೇಳದೆ 15 ದಿನದ ಒಳಗಾಗಿ ಜಿಲ್ಲೆಯ ಎಲ್ಲರಿಗೂ ಪರಿಹಾರ ಬರಲೇಬೇಕೆಂದು ಒತ್ತಾಯ ಮಾಡಿದರು.

ತಾಲೂಕ ಅಧ್ಯಕ್ಷ ಈರಪ್ಪ ಕುಳೆಕುಮಟಗಿ ಅವರು ಮಾತನಾಡಿ, ಭೀಮೆ, ಕೃಷ್ಣಾ ಹಾಗೂ ದೋಣಿಯ ಪ್ರವಾಹದಿಂದಾಗಿ ಸಾಕಷ್ಟು ರೈತರ ಕೃಷಿ ಭೂಮಿಗಳ ಬೆಳೆಗಳು ಹಾಳಾಗಿರುವ ಜೊತೆಗೆ ಮನೆ ಮಠಗಳು ಕೂಡ ಬಿದ್ದಿರುವ ಉದಾಹರಣೆಗಳಿವೆ. ಜೊತೆಗೆ ಹಲವಾರುಪ್ರಾಣಿಗಳುಕೂಡನೀರಿನಲ್ಲಿಕೊಚ್ಚಿಕೊಂಡು ಹೋಗಿವೆ. ಇದಕ್ಕೆಲ್ಲ ಪರಿಹಾರ ನೀಡಬೇಕೆಂದು ಆಗ್ರಹ ಮಾಡುತ್ತಿದ್ದೇವೆ. ಒಂದು ವೇಳೆ ತಡವಾದರೆ ಉಗ್ರ ಹೋರಾಟ ಮಾಡಲಾಗುವುದು ಎಂದರು.

ಹಿರಿಯರಾದ ಬಸಗೊಂಡಪ್ಪ ಉಮ್ರಾಣಿ ಅವರು ಮಾತನಾಡಿ,ದೇವರಹಿಪ್ಪರಗಿ ತಾಲೂಕಿನ ಎಲ್ಲಾ ರೈತರ ಜಮೀನಿನ ಸಮಸ್ತ ಬೆಳೆಗಳು ಕೂಡ ನಷ್ಟಗೊಂಡಿರುವ ಹಿನ್ನೆಲೆಯಲ್ಲಿ ಯಾರಿಗೂ ತಾರತಮ್ಯ ಮಾಡದೆ ಎಲ್ಲರಿಗೂ ನಷ್ಟ ಪರಿಹಾರವನ್ನು ಕೊಡಬೇಕು. ಅದೇ ರೀತಿಯಾಗಿ ಫಸಲು ಭೀಮಾ ಯೋಜನೆಯ ವಿಮೆವೂ ಕೂಡ ಆದಷ್ಟು ಬೇಗನೆ ಕೊಡಬೇಕೆಂದರು.

ಈ ವೇಳೆ ಜಿಲ್ಲಾ ಕಾರ್ಯಾಧ್ಯಕ್ಷ ಪ್ರಕಾಶ ತೇಲಿ, ದೇವರಹಿಪರಗಿ ತಾಲೂಕ ಗೌರವಾಧ್ಯಕ್ಷ ಶಿವಾನಂದಯ್ಯ ಹಿರೇಮಠ, ಮಹಿಳಾ ಘಟಕದ ಅಧ್ಯಕ್ಷೆ ಗಿರಿಜಾ ಮೈತ್ರಿ, ಸುನಂದ ಸೊನ್ನಳ್ಳಿ, ಅಂಬವ್ವ ಬಿರಾದಾರ,

ಎಂ.ಡಿ. ಮನಹಳ್ಳಿ, ರಮೇಶ ಚಾಂದಕವಟಗಿ, ಸಂಗಪ್ಪಗೌಡ ಬಿರಾದಾರ, ಶಿವಪ್ಪ ತಾಳಿಕೋಟಿ, ಮಹಾಂತಪ್ಪ ಸುಂಬಡ, ಕಾಶೀನಾಥ ಬಿರಾದಾರ, ಮುಜಪ್ಪ ಗುಡ್ಡಳ್ಳಿ, ಅಶೋಕ ಬಿರಾದಾರ,

ಸಿದ್ದಪ್ಪ ಪೂಜಾರಿ, ಶಿವಶಂಕರ ಬಿರಾದಾರ, ಸಿಕಂದರ್ ತೊನಶ್ಯಾಳ, ಬಸಗೊಂಡ ಉಮ್ರಾಣಿ ಸೇರಿದಂತೆ ನೂರಾರು, ರೈತರು ಇದ್ದರು.

# ಗುತ್ತಿ ಬಸವಣ್ಣ ಕಾಲುವೆ ಒಡೆದು ಬೆಳೆಹಾನಿ ಶಾಸಕ ಪಾಟೀಲರಿಂದ ಪರಿಶೀಲನೆ



**ಇಂಡಿ:** ತಾಲೂಕಿನ ತಡವಲಗಾ ಗ್ರಾಮದ ಗುತ್ತಿ ಬಸವಣ್ಣ ಏತನೀರಾವರಿ ಕಾಲುವೆ ಒಡೆದು ರೈತರ ಜಮೀನುಗಳು ಹಾಗೂ ಬೆಳೆ ನಾಶ ಆಗಿರುವದನ್ನು ಶಾಸಕ ಯಶವಂತರಾಯಗೌಡ ಪಾಟೀಲ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದರು.

ಅತೀವೃಷ್ಟಿಯಿಂದ ಹಾಗೂ ಭೀಮಾ ಪ್ರವಾಹದಿಂದ ಈ ವರ್ಷ ರೈತರ ,ಜನತೆಯ ಬದುಕು ದುಸ್ಥರವಾಗಿದೆ, ಕೃಷಿಕರು ತಮ್ಮ ಸಂಪೂರ್ಣ ಬೆಳೆ ಕಳೆದುಕೊಂಡಿದ್ದಾರೆ. ಮನೆಗಳು ಹಾನಿಯಾಗಿ ನಿರಾಶ್ರೀತರಾಗಿದ್ದಾರೆ ಆದರೆ ಗುತ್ತಿಬಸವಣ್ಣ ಏತನೀರಾವರಿ ಕಾಲುವೆ ಕೂಡಾ ಒಡೇದು ರೈತರ ಬದುಕಿನಲ್ಲಿ ಮತ್ತಷ್ಟು ಸಂಕಷ್ಟ ತಂದಿರುವುದು ಬಹಳ ನೋವು ತಂದಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ನೊಂದು ನುಡಿದರು.

ಭೀಮಾ ಪ್ರವಾಹ ,ಮಳೆಯ ಅವಾಂತರದಿಂದಲೇ ಸಾಕಷ್ಟು ರೈತರಿಗೆ ,ಸಾರ್ವಜನಿಕರಿಗೆ ತೊಂದರೆಯಾಗಿ ಮಾಸುವ ಮುನ್ನವೆ ಕಾಲುವೆಗಳು ಹಾಗೂ ಕೆರೆಗಳು ಒಡೆದು ಮತ್ತಷ್ಟು ಬೆಳೆ. ರೈತರ ಜಮೀನುಗಳು ಹಾಳುಮಾಡಿರುವುದು ಗಾಯದ ಮೇಲೆ ಬರೇ ಏಳೆದಂತಾಗಿದೆ.ಈ ಹಿಂದೆ ಗಡಿ ಭಾಗದಲ್ಲಿ ನೀರಿನ ತೊಂದರೆಯಿಂದ ಟ್ಯಾಂಕರ್ ಮೂಲಕ ನೀರು ಒದಗಿಸಿ ಬೆಳೆಗಳಿಗೆ ಬದುಕಿಸಿದ ಪ್ರಸಂಗ ಇತ್ತು ಆದರೆ ಇಂದು ಇಡೀ ಭೂಮಿ ಅಂತರ್ಜಲಮಟ್ಟ ಹೆಚ್ಚಾಗಿ ನೀರು ಭೂಮಿಯಿಂದ ಹೊರಹೋಮ್ಮುತ್ತಿವೆ , ಬೋರವೇಲ್ಲಗಳ ಕೇಸಿಂಗ್ ಸಹಿತ ಮೇಲ್ಭಾಗ ಎದ್ದುನೀರುಹೊರಚಿಮ್ಮುತ್ತಿವೆ,ನಿನ್ನೇಸುರಿದ ಭಾರಿ ಮಳೆಯಿಂದ ಗುತ್ತಿ ಬಸವಣ್ಣ ಕಾಲುವೆ ಒಡೆದು ಬಾರಿ ಅವಾಂತರ ಸೃಷ್ಟಿ ಮಾಡಿದೆ, ನೀರಿನ ರಭಸಕ್ಕೆ ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಯಾಗಿದೆ. ಕಷ್ಟ, ಸುಖ ಭಗವಂತನ ನಿಯಮದಂತೆ ನಡೆಯುತ್ತದೆ .ಇಷ್ಟೊಂದು ಪ್ರಮಾಣದಲ್ಲಿ ಹಾನಿಯಾಗಿರುವುದು ಖೇದಕರ ಸಂಗತಿ ನಾನು ಈಗಾಗಲೆ ಮಳೆ ಹಾಗೂ ಭೀಮಾಪ್ರವಾಹ ಹಾನಿಯಾದ ಬಗ್ಗೆ ಸರಕಾರಕ್ಕೆ ಮಾಹಿತಿ ನೀಡಿದ್ದೇನೆ. ಸದ್ಯ ಕಾಲುವೆ ಹಾಗೂ ಕೆರೆಗಳಿಂದ ಹಾನಿಯಾದ ಬಗ್ಗೆ ಕೂಡಾ ಸರಕಾರದ ಮಟ್ಟದಲ್ಲಿ ಪರಿಹಾರ ಒದಗಿಸಲು ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ.

ಹಾನಿಯಾದ ಕಾಲುವೆ ಶೀಗ್ರ ರೀಪೇರಿ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ ಧೈರ್ಯವಾಗಿರಿ ನಾನು ಸರಕಾರ ರೈತರ ಈ ಭಾಗದ ಜನರಪರವಾಗಿದೆ ಎಂದು ಆತ್ಮಸ್ಥೈರ್ಯ ತುಂಬಿದರು.

ಶಿವಯೋಗೇಪ್ಪ ಚನಗೊಂಡ, ತಹಶೀಲ್ದಾರ ಬಿ.ಎಸ್ ಕಡಕಭಾವಿ,ಡಿವೈಎಸ್ಪಿ ಜಗದೀಶ. ಕೆಬಿಜೆಎನ್.ಎಲ್ ಅಧಿಕಾರಿ ಮನೋಜಕುಮಾರ ಗಡಬಳ್ಳಿ, ಭೀಮಣ್ಣಾ ಕೌಲಗಿ, ಪ್ರಶಾಂತ ಕಾಳೆ, ಅಶೋಕ ಪ್ಯಾಟಿ, ತಾ.ಪಂ ಅಧಿಕಾರಿ ಭೀಮಾಶಂಕರ ಕನ್ನೂರ, ಉಮೇಶ ಲಮಾಣಿ, ಎಸ್.ಬಿ ಗದ್ಯಾಳ ನೀರಾವರಿ ಇಲಾಖೆ ಅಧಿಕಾರಿಗಳು, ತಡವಲಗಾ ಗ್ರಾಮದ ರೈತರು,ಮುಖಂಡರು ಸೇರಿದಂತೆ ತಾಲೂಕಾ ಅಧಿಕಾರಿಗಳು ಉಪಸ್ಥಿತರಿದ್ದರು.

# ಬಡಿಕಮಾನ ಬಳಿ ಮುಖ್ಯ ರಸ್ತೆ ದುರಸ್ತಿಗೆ ಆಗ್ರಹಿಸಿ ರಸ್ತೆ ತಡೆ




**ವಿಜಯಪುರ:** ನಗರದ ಬಡಿಕಮಾನ್‌ದಿಂದ ಅತಾವುಲ್ಲಾ ಸರ್ಕಲ್ ವರೆಗಿನ ಮುಖ್ಯರಸ್ತೆ ಕೂಡಲೇ ದುರಸ್ತಿ ಮಾಡುವಂತೆ ಆಗ್ರಹಿಸಿ ಸೋಮವಾರ ನಗರದ ಬಡಿಕಮಾನ ಬಳಿ ರಸ್ತೆ ತಡೆ ನಡೆಸಿ ಅಲ್ಲಿನ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಬಡಿಕಮಾನ ರಸ್ತೆ ಸಂಪೂರ್ಣ ಹದಗೆಟ್ಟಿದೆ.

ಇದರಿಂದ ಸಾರ್ವಜನಿಕರು ಈ ರಸ್ತೆಯಲ್ಲಿ ಸಂಚರಿಸಲು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಈ ರಸ್ತೆಯನ್ನು ಸಂಬಂಧಿಸಿದ ಮಹಾನಗರ ಪಾಲಿಕೆಯು ಕೂಡಲೆ ದುರಸ್ತಿಗೊಳಿಸಿ ಜನತೆಗೆ ಅನುಕೂಲ ಕಲ್ಪಿಸಬೇಕು ಎಂದು ಅಲ್ಲಿನ ನಿವಾಸಿಗಳು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಇರಫಾನ ಶೇಖ್ ಮಾತನಾಡಿ, ಇಲ್ಲಿನ ವಾರ್ಡ್ ನಂ. 23, 24, 25ರಲ್ಲಿ ಬರುವ ಮುಖ್ಯ ರಸ್ತೆಯಲ್ಲಿ ನಿತ್ಯ ಹಗಲಿರುಳು ಸಹಸ್ರಾರು ಜನರು ಬೈಕ್, ಅಟೋ ಸೇರಿದಂತೆ ವಿವಿಧ ವಾಹನದ ಮೂಲಕ ಸಂಚರಿಸುತ್ತಾರೆ.

ಕಳೆದ 3 ವರ್ಷಗಳಿಂದ ಈ ರಸ್ತೆ ಹಾಳಾಗಿದೆ.

ಈ ದುಸ್ಥಿತಿ ಜನಜೀವನದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ನಗರದ ಶಾಸಕರು ಇತ್ತ ಗಮನ ಹರಿಸುತ್ತಿಲ್ಲ ಎಂದು ದೂರಿದರು.

ಇಲಿಯಾಸ ಸಿದ್ದಿಕಿ ಮಾತನಾಡಿ, ಮುಖ್ಯ ಮಾರ್ಗದಲ್ಲಿ ಆಳವಾದ ತಗ್ಗು ಗುಂಡಿಗಳಿವೆ. ಮಳೆಯಾದರಂತೂ ಇಲ್ಲಿ ಸಂಚರಿಸುವದು ಕಷ್ಟಕರ. ಈ ಹಿಂದೆ ರಸ್ತೆಯಲ್ಲಿ ಸಂಚರಿಸಲಾಗದೆ ಹಲವರು ಎಡವಿ ಬಿದ್ದು ಗಾಯಗೊಂಡಿದ್ದಾರೆ.

ಆದ್ದರಿಂದ ಪಾಲಕೆಯ ಆಯುಕ್ತರು ಈ ರಸ್ತೆಯಲ್ಲಿ ಜೀವ ಹಾನಿಯಾಗುವಂಥಹ ಅಪಘಾತಗಳು ಸಂಭವಿಸುವ ಮುನ್ನ ಕೂಡಲೆ ಎಚ್ಚೆತ್ತು ರಸ್ತೆಯನ್ನು ದುರಸ್ತಿಗೊಳಿಸಬೇಕು ಎಂದು ಆಗ್ರಹಿಸಿದರು.

ಹಾಫಿಜ್ ಸಿದ್ದಿಕಿ ಮಾತನಾಡಿ, ರಸ್ತೆಯಿಂದ ಟ್ರಾಫಿಕ್ ಜಾಮ್ ಮತ್ತು ಪಾದಚಾರಿಗಳಿಗೆ ತೊಂದರೆ ಉಂಟಾಗಿದೆ. ಕೆಸರು ಮತ್ತು ಧೂಳಿನಿಂದ ಸಾರ್ವಜನಿಕ ಆರೋಗ್ಯಕ್ಕೂ ಹಾನಿಯಾಗಿದೆ. ಆದ್ದರಿಂದ ಸರ್ಕಾರ ಕೂಡಲೆ ರಸ್ತೆ ದುರಸ್ತಿ ಮಾಡಿಸಬೇಕು ಎಂದು ಒತ್ತಾಯಿಸಿದರು.

ಬಳಿಕ ಪಾಲಿಕೆಯ ಆಯುಕ್ತ ವಿಜಯಕುಮಾರ ಮೆಕ್ಕಳಕಿ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿ ಕೂಡಲೆ ರಸ್ತೆ ದುರಸ್ತಿಗೊಳಿಸುವ ಭರವಸೆ ನೀಡಿದರು.

ಈ ಪ್ರತಿಭಟನೆಯಲ್ಲಿ ಆಸಿಫ್ ಇನಾಮದಾರ, ಯಾಕುಬ್ ನಾಟಿಕಾರ, ಜಿಯಾವುಲ್ಲಾ ಪಠಾಣ ಸೇರಿದಂತೆ ನಗರದ ಹಲವು ನಿವಾಸಿಗಳು ಭಾಗವಹಿಸಿದ್ದರು.

# ಮಹರ್ಷಿ ವಾಲ್ಮೀಕಿ ಆದರ್ಶ ಪಾಲಿಸೋಣ: ಸಂತೋಷ ಬಂಡೆ



**ಇಂಡಿ:** ದೇಶದ ಆಧ್ಯಾತ್ಮಿಕ ಸರ್ವೋಚ್ಚ ಗ್ರಂಥಗಳಾದ ರಾಮಾಯಣ–ಮಹಾಭಾರತ ಗ್ರಂಥಗಳ ಅಧ್ಯಯನದಿಂದ ಜೀವನದಲ್ಲಿ ಉತ್ತಮ ಬದಲಾವಣೆಯಾಗುವುದರ ಜತೆಗೆ ಸಾಮಾಜಿಕವಾಗಿ ಉತ್ತಮ ವಾತಾವರಣ ನಿರ್ಮಾಣವಾಗುತ್ತದೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಮಂಗಳವಾರದಂದು ತಾಲೂಕಿನ ಹಿರೇರೂಗಿ ಗ್ರಾಮದ ಕೆಬಿಎಸ್, ಕೆಜಿಎಸ್, ಯುಬಿಎಸ್ ಶಾಲೆಯಲ್ಲಿ ಹಮ್ಮಿಕೊಂಡ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

'ಮಹರ್ಷಿವಾಲ್ಮೀಕಿರಾಮಾಯಣ ಮಾನವಜನಾಂಗಕ್ಕೆ ಬದುಕುವ ನೈತಿಕತೆಯ ಕೈಗನ್ನಡಿಯಾಗಿದೆ. ಮೇರು ಕೃತಿಯನ್ನು ನೀಡಿದ ವಾಲ್ಮೀಕಿ ಅವರ ಆದರ್ಶ ಮೌಲ್ಯಗಳನ್ನು ಪ್ರತಿಯೊಬ್ಬರು ಪಾಲನೆ ಮಾಡಬೇಕು' ಎಂದು ಹೇಳಿದರು.

ಶಿಕ್ಷಕ ಎಸ್ ಆರ್ ಚಾಳೇಕರ ಮಾತನಾಡಿ, ಪೋಷಕರು ಮಹಾನ್ ಗ್ರಂಥಗಳನ್ನು ಓದಿ ತಮ್ಮ ಮಕ್ಕಳಿಗೂ ಅದರ ವಿಚಾರಗಳನ್ನು ತಿಳಿಸಬೇಕು. ಮಹಾನ್‌ಪುರುಷರ ಗ್ರಂಥಗಳು ಯುವಜನಾಂಗಕ್ಕೆ ಸ್ಫೂರ್ತಿಯಾಗಿವೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕ ಅನಿಲ ಪತಂಗಿ ಮಾತನಾಡಿ, ಮಾನವ ಕುಲಕ್ಕೆ ಮಹರ್ಷಿ ವಾಲ್ಮೀಕಿ ಅವರ ರಾಮಾಯಣ ಕೃತಿ ಉತ್ತಮ ಕೊಡುಗೆ, ನುಡಿದಂತೆ ನಡೆದುಕೊಳ್ಳುವುದು ವಾಲ್ಮೀಕಿ ರಾಮಾಯಣದಿಂದ ತಿಳಿದು ಬರುತ್ತದೆ ಎಂದು ಹೇಳಿದರು.

ಮುಖ್ಯ ಶಿಕ್ಷಕಿ ವ್ಹಿ ವೈ ಪತ್ತಾರ, ಶಿಕ್ಷಕರಾದಎಸ್‌ಎಂಪಂಚಮುಖಿ, ಶೃದ್ಧಾ ಬಂಕಲಗಾ, ಎಸ್ ಎನ್ ಡಂಗಿ, ಜೆ ಸಿ ಗುಣಕಿ, ಸುಮಂಗಲಾ ಬೇನೂರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಬಸ್ ಕೊರತೆ; ವಿದ್ಯಾರ್ಥಿಗಳ ಪರದಾಟ



**ದೇವರಹಿಪ್ಪರಗಿ :** ಬಸ್‌ಗಳ ಕೊರತೆ ಹಾಗೂ ಇರುವ ಬಸ್‌ಗಳು ನಿಗದಿತ ಸಮಯಕ್ಕೆ ಬಾರದ ಕಾರಣ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಬಸ್‌ಗಳ ಬಾಗಿಲಲ್ಲಿ ನಿಂತು ಪ್ರಯಾಣಿಸುವಂತಾಗಿದೆ.

ಪಟ್ಟಣ ಹಾಗೂ ತಾಲ್ಲೂಕು ಕೇಂದ್ರದಲ್ಲಿನ ವಿವಿಧ ಶಾಲಾ?ಕಾಲೇಜುಗಳ ವಿದ್ಯಾರ್ಥಿಗಳಿಗೆ ಬಸ್ ಕೊರತೆ ಸಮಸ್ಯೆ ಕಾಡುತ್ತಿದೆ. ನಿತ್ಯ ಬಸ್‌ಗಳ ಬಾಗಿಲ ಬಳಿ ನಿಂತು, ಅಪಾಯಕಾರಿಯಾದ ಪ್ರಯಾಣವನ್ನು ಅನಿವಾರ್ಯವಾಗಿ ಮಾಡುವಂತಾಗಿದೆ.

ಬೆಳಿಗ್ಗೆ ಶಾಲಾ?ಕಾಲೇಜು ಆರಂಭದ ಸಮಯಕ್ಕೆ ಬಸ್‌ಗಳ ಕೊರತೆ ಅಷ್ಟಾಗಿ ಕಾಡುವುದಿಲ್ಲ. ಆದರೆ, ಮಧ್ಯಾಹ್ನ ಹಾಗೂ ಸಂಜೆ ಶಾಲೆ?ಕಾಲೇಜುಗಳು ಕೊನೆಗೊಳ್ಳುವ ಸಮಯಕ್ಕೆ ಸರಿಯಾಗಿ ಬಸ್‌ಗಳು ಇರುವುದಿಲ್ಲ. ಇರುವ ಬಸ್‌ಗಳನ್ನೇ ಸಾಗಬೇಕಿರುವುದರಿಂದ ಕಿಕ್ಕಿರಿದ ಜನಸಂದಣಿಯಲ್ಲೇ ಪ್ರಯಾಣಿಸಬೇಕಿದೆ' ಎಂದು ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಶಿವರಾಜ್ ತಳವಾರ ಹೇಳಿದರು.

ಬಸ್ ವ್ಯವಸ್ಥೆ ಇಲ್ಲದ ಪರಿಣಾಮ ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆಯಾಗಿದೆ. ಶೈಕ್ಷಣಿಕವಾಗಿ ಹಿನ್ನಡೆಯಾಗಲಿದೆ. ವ್ಯವಸ್ಥಾಪಕರು ಈ ಕುರಿತು ಕ್ರಮಕೈಗೊಳ್ಳಬೇಕು ಎಂದರು.

ಮಧ್ಯಾಹ್ನ ಹಾಗೂ ಸಂಜೆ ದೇವರಹಿಪ್ಪರಗಿಯಿಂದ ಇಂಡಿ, ಕೋರವಾರ, ಬಸವನಬಾಗೇವಾಡಿ, ಹೂವಿನಹಿಪ್ಪರಗಿ ಹಾಗೂ ತಾಳಿಕೋಟೆ ಮಾರ್ಗಗಳಲ್ಲಿ ಸಮರ್ಪಕವಾಗಿ ಬಸ್ ಸಂಚಾರಕ್ಕೆ ವ್ಯವಸ್ಥೆ ಮಾಡಬೇಕು. ಇದರಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಸಾಕಷ್ಟು ಅನುಕೂಲವಾಗಲಿದೆ' ಎಂದರು.

ಇಂಡಿ, ಸಿಂದಗಿ, ತಾಳಿಕೋಟೆ ಹಾಗೂ ಬಸವನಬಾಗೇವಾಡಿ ಮಾರ್ಗದಲ್ಲಿ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಕಲ್ಪಿಸಬೇಕು' ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಗಣೇಶ ಸಿಂಧೆ, ಆನಂದ ಬಿರಾದಾರ, ವೆಂಕಟೇಶರೆಡ್ಡಿ, ರಾವುತ ಎಸ್.ಟಿ, ಪ್ರಕಾಶ ಡೋಣೂರಮಠ ಆಗ್ರಹಿಸಿದರು.

# ಕಲಾವಿದರ ಬದುಕು ಮುಳ್ಳಿನ ಹಾಸಿಗೆ: ಸಿದ್ಧಲಿಂಗಶ್ರೀ




**ತಾಳಿಕೋಟೆ :** ದೃಶ್ಯಬಿಂಬ ಕಲಾ ಪ್ರತಿಷ್ಠಾನ ವಿಜಯಪುರದ ವತಿಯಿಂದ ತಾಳಿಕೋಟೆ ಪಟ್ಟಣದ ಖಾಸ್ಗತ ಮಠದ ಪವಾಡಗಳ ಆಧರಿತ ರಾಜ್ಯಮಟ್ಟದ ಚಿತ್ರಕಲಾ ಶಿಬಿರವನ್ನು ಖಾಸ್ಗತೇಶ್ವರಮಠದ ಪೀಠಾಧಿಪತಿ ಬಾಲಶಿವಯೋಗಿ ಸಿದ್ಧಲಿಂಗದೇವರು ಕ್ಯಾನವಾಸ್ ಮೇಲೆ ಚಿತ್ರ ಬರೆಯುವ ಮೂಲಕ ಸೋಮವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಹಿರಿಯ ಕಲಾವಿದರನ್ನು ಒಂದೆಡೆ ಕೂಡಿಸಿ ಅವರಿಂದ ಬರೆಸಿದ ಅಮೂಲ್ಯ ಕಲಾಕೃತಿಗಳಿಂದ ಮಠದ ಕಂಬಗಳಿಗೆ ಜೀವಂತಿಕೆ ಬರಲು ಸಾಧ್ಯವಾಗುತ್ತಿರುವುದು ಸಂತಸ ತಂದಿದೆ.

ಕಲಾವಿದರ ಬದುಕು ಗುಲಾಬಿ ಹೂ ಇದ್ದಂತೆ ಸುಂದರ ಗುಲಾಬಿ ಅವರ ಕಲಾಕೃತಿಯಾದರೆ ಅದರಡಿಯ ಮುಳ್ಳಿನಂತೆ ನೋವು ಸಂಕಷ್ಟದ ಬದುಕು ಕಲಾವಿದರದ್ದು. ಇಚೇಗೆ ಡಿಜಿಟಲ್ ಕ್ರಾಂತಿಯಿಂದ ಚಿತ್ರಕಲೆ ಹಿನ್ನೆಲೆಗೆ ಸರಿಯುತ್ತಿದ್ದರೂ, ಕಲಾವಿದರ ಕೈಚಳಕದ ವೈಭವ ಅದಕ್ಕೆ ಸಾಧ್ಯವಾಗದು ಎಂದರು.

ಹಿರಿಯ ಪತ್ರಕರ್ತ ಜಿ.ಟಿ.ಘೋರ್ಪಡೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಚಿತ್ರ ಕಲಾವಿದರುಗಳಾದ ಕೆ.ಗಂಗಾಧರ, ಎಸ್.ಟಿ.ಕೆಂಭಾವಿ, ಪಿ.ಎಸ್. ಕಡೆಮನಿ, ಎಸ್.ಕೆ.ಪತ್ತಾರ, ಪಿ.ಬಿ.ಗವಾನಿ, ಡಿ.ಕೆ.ಕಾಮಕಾರ, ಅಮಿತ ಕಮ್ಮಾರ, ಬಸವರಾಜ ಅಗ್ನಿ, ಆರ್.ಎಚ್.ಸಾಸನೂರ, ಎಚ್.ಎಸ್.ಮಲ್ಕಾಪುರೆ, ಬಸವರಾಜ ಕುರಿ, ರಾಜು ಸುತಾರ ಅವರುಗಳನ್ನು ಹೂಗುಚ್ಛನೀಡಿ ಸ್ವಾಗತಿಸಲಾಯಿತು.

ದೃಶ್ಯಬಿಂಬ ಕಲಾ ಪ್ರತಿಷ್ಠಾನ ವಿಜಯಪುರದ ಅಧ್ಯಕ್ಷ ಸತೀಶ ಕೇಮಶೆಟ್ಟಿ, ಉಪಾಧ್ಯಕ್ಷ ಭೀಮನಗೌಡ ಗುಣಕನಾಳ, ಪದಾಧಿಕಾರಿಗಳು, ಶಿಬಿರದ ಸಂಚಾಲಕರುಗಳಾದ ಕುಮಾರೇಶ್ವರ ಪಬ್ಲಿಕ್ ಸ್ಕೂಲ್‌ನ ಅಧ್ಯಕ್ಷ ಕಾಶಿನಾಥ ಸಜ್ಜನ, ಪುರಸಭೆ ಸದಸ್ಯ ಜೈಸಿಂಗ ಮೂಲಿಮನಿ, ವಿಜೆಪಿ ಡೆವೆಲಪರ್ಸ್‌ನ ವೀರೇಶಗೌಡ ಪಾಟೀಲ ಮಿಣಜಗಿ, ಮಲ್ಲನಗೌಡ ಪಾಟೀಲ ಬ.ಸಾಲವಾಡಗಿ, ಶಿವು ಸಜ್ಜನ(ದೊಡಮನಿ), ರಾಜು ಮ್ಯಾಗೇರಿ, ಕಲಾವಿದ ದೊಡಮನಿ ಇತರರಿದ್ದರು.

ಅ.9ರಂದು ಸಮಾರೋಪ ನಡೆಯಲಿದ್ದು ಸಮಾರೋಪದ ನಂತರ ಚಿತ್ರಕಲಾವಿದರ ಕಲಾಕೃತಿಗಳನ್ನು ಶ್ರೀಮಠದವರೆಗೆ ಮೆರವಣಿಗೆಯ ಮೂಲಕ ಕೊಂಡೊಯ್ಯಲಾಗುವುದು.

ಶಿಬಿರದ ದಾನಿಗಳನ್ನು ಹಾಗೂ ತಾಳಿಕೋಟೆ ಪಟ್ಟಣದ ಐವರು ಹಿರಿಯ ಚಿತ್ರಕಲಾವಿದರನ್ನು ಸಮಾರೋಪದಲ್ಲಿ ಗೌರವಿಸಲಾಗುವುದು ಶಿಬಿರದಲ್ಲಿ 13 ಕಲಾವಿದರುಗಳಿದ್ದು ಬಾಬುರಾವ್ ನಿಡೋಣಿ ಸಂಜೆಗೆ ಬರಲಿದ್ದಾರೆ.

ಒಟ್ಟು 13 ಜನ ದಾನಿಗಳು ನೆರವಾಗುತ್ತಿದ್ದಾರೆ ಎಂದು ಸಂಘಟಕರು ತಿಳಿಸಿದರು.

# ವೈದ್ಯಕೀಯ ಕಾಲೇಜು: ರಾಜಕಾರಣ ಬೇಡ




**ವಿಜಯಪುರ :** ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಯಾಗಬೇಕು ಎಂದು ಆಗ್ರಹಿಸಿ ನಡೆಯುತ್ತಿರುವ ಹೋರಾಟದ ವೇದಿಕೆಗೆ ಬಂದು ಯಾರೂ ರಾಜಕಾರಣ ಮಾಡಬಾರದು, ಹೋರಾಟಗಾರರ ಬಗ್ಗೆ ಹಗುರವಾಗಿ ಮಾತನಾಡಬಾರದು ಇಂಡಿ ಶಾಸಕ ಯಶವಂತರಾಗೌಡ ಪಾಟೀಲ ಹೇಳಿದರು.

ಸರ್ಕಾರಿ ವೈದ್ಯಕೀಯ ಸ್ಥಾಪನೆಗೆ ಆಗ್ರಹಿಸಿ ನಡೆಯುತ್ತಿರುವ ಧರಣಿ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ ಬೆಂಬಲ ವ್ಯಕ್ತಪಡಿಸಿ ಅವರು ಮಾತನಾಡಿದರು.

ಯಾವುದೇ ಪಕ್ಷ, ವ್ಯಕ್ತಿ ಇರಲಿ, ಅಧಿಕಾರ ಶಾಶ್ವತ ಅಲ್ಲ, ಉತ್ತಮ ಕೆಲಸಕ್ಕಾಗಿ ಹೋರಾಟ ನಡೆಯುತ್ತಿದೆ.

ಜನಪರವಾದ ಈ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲ ಇದೆ, ನಿಮ್ಮ ಹೋರಾಟಕ್ಕೆ ಮುಖ್ಯಮಂತ್ರಿ ಸ್ಪಂದಿಸಲಿದ್ದಾರೆ ಎಂದು ಹೇಳಿದರು.

ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಆಗ್ರಹಿಸಿ ನಡೆಯುತ್ತಿರುವ ಹೋರಾಟಕ್ಕೆ ನಾನೊಬ್ಬ ಶಾಸಕರಾಗಿ ಬಂದಿಲ್ಲ, ಜಿಲ್ಲೆಯ ಒಬ್ಬ ಜನ ಸಾಮಾನ್ಯನಾಗಿ ಬಂದಿದ್ದೇನೆ, ಸರ್ಕಾರಿ ವೈದ್ಯಕಿಯ ಕಾಲೇಜುಜಿಲ್ಲೆಯಲ್ಲಿಆಗಲೇಬೇಕು ಜಿಲ್ಲೆಯ ಶೈಕ್ಷಣಿಕ ಪ್ರಗತಿಗೆ ಇದು ಸಹಾಯವಾಗುತ್ತದೆ ಎಂದರು.

ಹೋರಾಟಕ್ಕೆ ಸ್ಪಂದಿಸುವುದು ಜಿಲ್ಲೆಯ ಎಲ್ಲಾ ನಾಗರಿಕರ ಆದ್ಯ ಕರ್ತವ್ಯ. ಅತ್ಯಂತ ಹಿಂದುಳಿದ ಜಿಲ್ಲೆಗೆಅವಕಾಶಕೊಡಬೇಕು.ನಮ್ಮ ಕ್ಷೇತ್ರದ ಜನತೆ ಸಂಪೂರ್ಣವಾಗಿ ಇದಕ್ಕೆ ಬೆಂಬಲಿಸುತ್ತಾರೆ.

ಯಾರೆ ಜನಪರ ಹೋರಾಟ ಮಾಡಲಿ ಅದರಲ್ಲಿ ಭಾಗವಹಿಸುವುದು ನಮ್ಮ ಕರ್ತವ್ಯ. ಸಂಬಂದಪಟ್ಟ ಅಧಿಕಾರಗಳೊಂದಿಗೆ ಮಾತನಾಡಿ ಇದರ ಬಗ್ಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ,ವೈದ್ಯಕೀಯ ಶಿಕ್ಷಣ ಸಚಿವರ ಗಮನಕ್ಕೆ ತರುತ್ತೇನೆ ಎಂದು ಹೇಳಿದರು.

ಬಾಗಲಕೋಟೆಯ ನಾಗರಾಜ ಕಲ್ಲಕುಟುಕರ ಮಾತನಾಡಿ, ಸರ್ಕಾರಿ ವೈದ್ಯಕೀಯ ಕಾಲೇಜನ್ನು ಖಾಸಗಿಯವರಿಗೆ ಮಾರಾಟ ಮಾಡಲು ಬಿಡುವುದಿಲ್ಲ, ನಾವು ಒಗ್ಗಟ್ಟಿನಿಂದ ಹೋರಾಟ ಮಾಡುತ್ತೇವೆ ಎಂದು ಹೇಳಿದರು.

ಕೆಪಿಸಿಸಿ ವಕ್ತಾರ ಎಸ್. ಎಂ.ಪಾಟೀಲ ಗಣಿಹಾರ, ಕರ್ನಾಟಕ ರಾಷ್ಟ್ರೀಯ ಸಮಿತಿ ರಾಜ್ಯ ಕಾರ್ಯದರ್ಶಿ ಶಿವಾನಂದ ಯಡಹಳ್ಳಿ, ಅಶೋಕ ಜಾದವ, ಸೀನು ಹಿಪ್ಪರಗಿ, ಅಶೋಕ ಜಾದವ, ಅನಿಲ ಹೊನಕಟ್ಟಿ, ಲಕ್ಷ್ಮಣ ಚಡಚಣ, ಗೋತಕನಾಥ,ಪಿ.ಎಸ್.ಹನಕಟ್ಟಿ, ಮುತ್ತುರಾಜ ಹೊನಗೊಂಡ, ದೇಸು ಚೌಹಾಣ, ಹೋರಾಟ ಸಮಿತಿಯ ಅನಿಲ ಹೊಸಮನಿ, ಅರವಿಂದ ಕುಲಕರ್ಣಿ, ಮಲ್ಲಿಕಾರ್ಜುನ ಕೆಂಗನಾಳ, ಮಲ್ಲಿಕಾರ್ಜುನ ಎಚ್.ಟಿ., ಲಲಿತಾ ಬಿಜ್ಜರಗಿ, ವಿದ್ಯಾವತಿ ಅಂಕಲಗಿ, ಕೆ. ಎಫ್. ಅಂಕಲಗಿ, ಸಿದ್ದಲಿಂಗ ಬಾಗೇವಾಡಿ, ಅಕ್ರಂ ಮಾಶ್ಯಾಳಕರ, ಶ್ರೀನಾಥ ಪೂಜಾರಿ, ಸುರೇಶ ಬಿಜಾಪುರ, ಸುರೇಶ ಜೀಬಿ, ಡಾ ಎಂ. ಆರ್. ಗುರಿಕಾರ, ಗೀತಾ. ಎಚ್., ನಿಂಗರಾಜ ಬಿದರಕುಂದಿ, ಕಲ್ಲಪ್ಪ ಬಬಲಾದ, ನೀಲಾಂಬಿಕಾ ಬಿರಾದಾರ, ಸುಶೀಲಾ ಮಿಣಜಗಿ, ಮಲ್ಲಪ್ಪ ಬಿರಾದಾರ, ಅಕ್ಷಯಕುಮಾರ ಅಜಮನಿ, ಸಿದ್ರಾಮಯ್ಯ ಹಿರೇಮಠ ಧರಣಿಯಲ್ಲಿ ಪಾಲ್ಗೊಂಡಿದ್ದರು.

## ಮಂಡ್ಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ ಖರ್ಚು ವೆಚ್ಚಗಳ ಕುರಿತು ಲೋಕಾಯುಕ್ತ ತನಿಖೆ

# ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿಣಿ ಸರ್ವಾನುಮತದಿಂದ ನಿರ್ಧಾರ

**ಬೆಂಗಳೂರು :** ಮಂಡ್ಯದಲ್ಲಿ ನಡೆದ 87ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಖರ್ಚು ವೆಚ್ಚಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಮಾಡಿರುವ ವೆಚ್ಚವೂ ಸೇರಿದಂತೆ ಆಮೂಲಾಗ್ರವಾಗಿ ತನಿಖೆ ಮಾಡಲು ಲೋಕಾಯುಕ್ತರನ್ನು ಕೋರಲು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿಣಿ ಸರ್ವಾನುಮತದಿಂದ ತೀರ್ಮಾನಿಸಿದೆ.

4.10.25 ರಂದು ಬಾಗಲಕೋಟೆ ಜಿಲ್ಲೆಯ ಜಮಖಂಡಿಂ–ಯಲ್ಲಿರುವ ಅನ್ನಪೂರ್ಣೇಶ್ವರಿ ಹೋಟೆಲ್ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ಈ ನಿರ್ಣಯವೂ ಸೇರಿದಂತೆ ಹಲವು ಪ್ರಮುಖ ನಿರ್ಣಯಗಳನ್ನು ತೆಗೆದು ಕೊಳ್ಳಲಾಗಿದೆ.

ಮಂಡ್ಯದಲ್ಲಿ ಅಯೋಜಿತವಾಗಿದ್ದ 87ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರದಿಂದ ಮಂಡ್ಯ ಜಿಲ್ಲಾಡಳಿತಕ್ಕೆ ಬಿಡುಗಡೆಯಾದ 30 ಕೋಟಿ ರೂಪಾಯಿಗಳ ಅನುದಾನದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಡಳಿತದಿಂದ ಪಡೆದು ಕೊಂಡಿದ್ದು ಕೇವಲ 2.5 ಕೋಟಿ ರೂಪಾಯಿಗಳನ್ನು ಮಾತ್ರ. ಉಳಿದ 27.5 ಕೋಟಿ ರೂಪಾಯಿಗಳನ್ನು ಮಂಡ್ಯ ಜಿಲ್ಲಾಡಳಿತವೇ ನಿರ್ವಹಿಸಿದೆ. ವೇದಿಕೆ, ಆಹಾರ, ವಸತಿ, ಸಾಂಸ್ಕೃತಿಕ ಕಾರ್ಯಕ್ರಮಗಳು, ಶಾಮಿಯಾನದಿಂದ ಹಿಡಿದು ಪೊರಕೆ ಖರೀದಿಯವರೆಗೆ ಹಣ ದುರುಪಯೋಗದ ಅಪಾದನೆಗಳು ಬಂದಿದ್ದು, ಸ್ಕೈ ಬ್ಲ್ಯೂ ಇವೆಂಟ್ ಮ್ಯಾನೇಜ್ಮಂಟ್ ನಿರ್ವಹಣೆ, ಇವೆಲ್ಲವೂ ಜಿಲ್ಲಾಡಳಿತದ ವ್ಯಾಪ್ತಿಗೇ ಬರುತ್ತದೆ. ಇದು ಗೊತ್ತಿದ್ದರೂ ಸಹ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಮೇಲೆ ನಿರಂತರವಾಗಿ ಹಣದ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರ, ಹಣಕಾಸು ದುರುಪಯೋಗದ ಕು–ರಿತು ಅಪಾದನೆಗಳನ್ನು ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ತನ್ನ ಸ್ವಚ್ಛ ಆಡಳಿತ, ರುಜುತ್ವ ಮತ್ತು ಪಾರದರ್ಶಕತೆಯನ್ನು ಸಾಬೀತು ಮಾಡಲು ಕನ್ನಡ ಸಾಹಿತ್ಯ ಪರಿಷತ್ತು ಮಾಡಿದ ವೆಚ್ಚವೂ ಸೇರಿದಂತೆ ಎಲ್ಲವನ್ನೂ ಲೋಕಾಯುಕ್ತದ ಆಮೂಲಾಗ್ರಹತನಿಖೆಗೆಒಪ್ಪಿಸಲು,ಕನ್ನಡಸಾಹಿತ್ಯಪರಿಷತ್ತಿನ ಕಾರ್ಯಕಾರಣಿ ಸರ್ವಾನುಮತದಿಂದ ತೀರ್ಮಾನಿಸಿದೆ.

ದುರದ್ದೇಶಪೂರ್ವಕ ದೂರುದಾರರಲ್ಲಿ ಪ್ರೊ.ಜಯಪ್ರಕಾಶ ಗೌಡ, ಮೀರಾ ಶಿವಲಿಂಗಯ್ಯ, ಕೆ.ಟಿ.ಶ್ರೀಕಂಠೇ ಗೌಡ ಮೊದಲಾದಅನೇಕರು,ಅನೇಕಸಂಸ್ಥೆಗಳನ್ನುನಡೆಸುತ್ತಿದ್ದಾರೆ. ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿದ್ದಾರೆ. ಅವರ ಸಂಸ್ಥೆಗಳ ಮೇಲೆ ಕೂಡ ಹಣಕಾಸು ದುರುಪಯೋಗ, ಆಡಳಿತದಲ್ಲಿ ಅಕ್ರಮ, ಸ್ವಜನ ಪಕ್ಷಪಾತದಂತಹ ಗಂಭೀರ ಆರೋಪಗಳಿವೆ. ಸೂಕ್ತ ದಾಖಲೆಗಳೂ ಇವೆ. ಅವರೂ ಕೂಡ ಕನ್ನಡ ಸಾಹಿತ್ಯ ಪರಿಷತ್ತಿನಂತೆ ಸ್ವಯಂ ಪ್ರೇರಣೆಯಿಂದ ಲೋಕಾಯುಕ್ತ ತನಿಖೆಗೆ ಒಳಪಟ್ಟು ಸ್ವಚ್ಛರಾಗಿ ಹೊರ ಬರುವ ಮೂಲಕ ಮಾದರಿಯಾಗುತ್ತಾರೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿಣಿ ಸರ್ವಾನು ಮತದಿಂದ ಅಪೇಕ್ಷಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ನಿರಂತರವಾಗಿ ಅಪಾದನೆ ಮಾಡುತ್ತಾ ಬಂದವರಲ್ಲಿ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ.ಎಚ್.ಎಲ್.ಪುಷ್ಪ ಕೂಡ ಸೇರಿದ್ದಾರೆ . ಈಗ ಅವರ ಮೇಲೆ ಅವರ ಪದಾಧಿಕಾರಿಗಳೇ ಸರ್ವಾಧಿಕಾರ, ಆರ್ಥಿಕ ಅಶಿಸ್ತು, ಹಣಕಾಸು ದುರುಪಯೋಗದಂತಹ ಗಂಭೀರಆರೋಪಗಳನ್ನುಮಾಡಿದ್ದು.ಅದುಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರವನ್ನು ಪಡೆದಿದೆ. ಸಂಘದ ಲೆಕ್ಕ ಪತ್ರಗಳನ್ನು ಸರಿಯಾಗಿ ನಿರ್ವಹಿಸದೆ ಆರ್ಥಿಕ ಅವ್ಯವಹಾರ ನಡೆಸಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಕರ್ನಾಟಕ ಲೇಖಕಿಯರ ಸಂಘ ಸ್ಥಾಪನೆಗೊಳ್ಳುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಅದರ ಅಧ್ಯಕ್ಷರಾಗಿದ್ದ ಜಿ.ನಾರಾಯಣ ಮುಖ್ಯವಾದ ಪಾತ್ರವನ್ನು ವಹಿಸಿದ್ದರು. ಈ ಹಿನ್ನೆಲೆಯಲ್ಲಿ ಕರ್ನಾಟಕ ಲೇಖಕಿಯರ ಸಂಘದ ಅವ್ಯವಹಾರ ಕುರಿತೂ ಸಂಘ ಸಂಸ್ಥೆಗಳ ನಿಬಂಧಕರು, ಕನ್ನಡ ಸಾಹಿತ್ಯ ಪರಿಷತ್ತಿನ ಮೇಲೆ ನಡೆಸಿದಂತಹ ತನಿಖೆ ಮತ್ತು ವಿಚಾರಣೆಯನ್ನು ನಡೆಸಬೇಕು ಎಂದು ಕೋರಲು ಹಾಗೂ ಸರ್ಕಾರವನ್ನು ಒತ್ತಾಯಿಸಲು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾ–ರಿಣಿ ಸರ್ವಾನುಮತದಿಂದ ತೀರ್ಮಾನಿಸಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ವಿರುದ್ಧ ನಿರಂತರ ಆರ್ಥಿಕ ಅಶಿಸ್ತಿನ ಅಪಾದನೆ ಮಾಡಿ ಆಡಳಿತಾಧಿಕಾರಿಗಳ ನೇಮಕಕ್ಕೆ ಒತ್ತಾಯಿಸುತ್ತಾ ಬಂದವರಲ್ಲಿ ಡಾ.ವಸುಂಧರಾ ಭೂಪತಿ ಲೇಖಕಿಯರ ಸಂಘದ ಮಾಜಿ ಅಧ್ಯಕ್ಷರು, ಆರ್.ಜಿ.ಹಳ್ಳಿ ನಾಗರಾಜ್, ಪುಷ್ಪ ಅವರ ಪತಿ, ಲೇಖಕಿಯರ ಸಂಘದ ಮಂಡ್ಯ ಜಿಲ್ಲಾ ಪ್ರತಿನಿಧಿ ಮೀರಾ ಶಿವಲಿಂಗಯ್ಯ ಈ ಮೂವರೂ ಸೇರಿದಂತೆ ಎನ್.ಹನುಮೇಗೌಡ, ಬಿ. ಜಯಪ್ರಕಾಶ ಗೌಡ, ಪ್ರೊ. ಎಸ್.ಜಿ.ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ಸಿ.ಕೆ.ರಾಮೇಗೌಡ ಮೊದಲಾದವರು ಕರ್ನಾಟಕ ಲೇಖಕಿಂ–ಯರ ಸಂಘದ ಆರ್ಥಿಕ ಅವ್ಯವಹಾರಗಳ ತನಿಖೆ ಮತ್ತು ವಿಚಾರಣೆಗೆ ಸರ್ಕಾರವನ್ನು ಒತ್ತಾಯಿಸಿ ತಮ್ಮ ಕನ್ನಡದ ಮೇಲಿನ ಬದ್ಧತೆಯನ್ನು, ಅಭಿಮಾನವನ್ನು, ಪ್ರೀತಿಯನ್ನು ಹಾಗೂ ನಿಷ್ಪಕ್ಷಪಾತವನ್ನು ಸಾಬೀತು ಪಡಿಸಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿಣಿ ಸರ್ವಾನುಮತದಿಂದ ಅಪೇಕ್ಷಿಸಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಆರ್ಥಿಕ ವ್ಯವಹಾರಗಳೆಲ್ಲವೂ ಪಾರದರ್ಶಕವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಂತರಿಕ ಲೆಕ್ಕಪರಿಶೋಧಕರ ಜೊತೆಗೆ ಶಾಸನಬದ್ಧ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧಕರಿಂದಲೂ ತಪಾಸಣೆ ನಡೆಸಲಾಗುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಖರ್ಚು ವೆಚ್ಚಗಳೂ ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆಯ ಅನ್ವಯ ರೂಪುಗೊಂಡಂತಹ "ಹಣಕಾಸು ಸಮಿತಿ"ಯಲ್ಲಿ ಚರ್ಚೆಗೆ ಒಳಗಾಗಿ ಒಪ್ಪಿಗೆಯನ್ನು ಪಡೆಯುತ್ತವೆ. ಇಲ್ಲಿ ಕರ್ನಾಟಕ ಆರ್ಥಿಕ ಇಲಾಖೆಯ ಕಾರ್ಯದರ್ಶಿ ಅಥವಾ ಅವರ ಪ್ರತಿನಿಧಿ ಇರುತ್ತಾರೆ. ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರು ಅಥವಾ ಅವರ ಪ್ರತಿನಿಧಿ ಇರುತ್ತಾರೆ. ಇಲ್ಲಿ ತೆಗೆದು ಕೊಳ್ಳುವ ನಿರ್ಣಯಗಳು ಕಾರ್ಯಕಾರಿ ಸಮಿತಿಯಲ್ಲಿ ಮಂಡಿತವಾಗಿ ಒಪ್ಪಿಗೆ ಪಡೆದ ನಂತರ ವಿಶೇಷ ಸಾಮಾನ್ಯ ಸಭೆಯಲ್ಲಿ ಅನುಮೋದನೆಗೊಳ್ಳುತ್ತವೆ. ಹೀಗಿದ್ದರೂ ಕನ್ನಡ ಸಾಹಿತ್ಯ ಪರಿಷತ್ತಿನ ಲೆಕ್ಕ ಪತ್ರಗಳ ಕುರಿತು ನಿರಂತರವಾಗಿ ಅಪಪ್ರಚಾರ ನಡೆಯುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಅಕೌಂಟೆಂಟ್ ಜನರಲ್ ಆಡಿಟ್ –ಕರ್ನಾಟಕ ಅವರಿಂದ ಮೂರನೆಯ ಆಡಿಟ್ ಮಾಡಿಸಿ,ಇನ್ನಷ್ಟು ಖಚಿತತೆ ಮತ್ತು ನಿಖರತೆಯನ್ನು ಪಡೆಯಲು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಣಿ ಸರ್ವಾನುಮತದಿಂದ ತೀರ್ಮಾನಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕುರಿತು ಅತೃಪ್ತರು, ಅಸಂತುಷ್ಟರು, ನಿರಂತರವಾಗಿ ನಡೆಯುತ್ತಿರುವ ಅಪಪ್ರಚಾರ ಮತ್ತು ಪರಿಷತ್ತಿನ ಆಡಳಿತದಲ್ಲಿ ಹಿಂಬಾಗಿಲ ಪ್ರವೇಶದ ಪ್ರಯತ್ನಗಳನ್ನು ಕಾನೂನು ಮೂಲಕ ಎಲ್ಲ ಮಟ್ಟದಲ್ಲೂ ಎದುರಿಸಲು ಕಾರ್ಯಕಾರಿ ಸಮಿತಿಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

**– ಎನ್.ಎಸ್.ಶ್ರೀಧರ ಮೂರ್ತಿ**
**ಸಂಚಾಲಕರು, ಮಾಧ್ಯಮ ವಿಭಾಗ**
**ಕನ್ನಡ ಸಾಹಿತ್ಯ ಪರಿಷತ್ತು**

# ಮೈಸೂರು ದಸರಾ ಜಂಬೂ ಸವಾರಿ ಮೆರವಣಿಗೆ: ಗದಗ ಜಿಲ್ಲೆಯ ಸ್ತಬ್ಧಚಿತ್ರಕ್ಕೆ ಪ್ರಶಸ್ತಿ



**ಗದಗ:** ಮೈಸೂರು ದಸರಾ ಜಂಬೂ ಸವಾರಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಜಿಲ್ಲೆಯ ಸೂಡಿ ಗ್ರಾಮದ ಐತಿಹಾಸಿಕ ಜೋಡು ಕಳಸ (ನಾಗೇಶ್ವರ) ದೇವಾಲಯದ ಸ್ತಬ್ಧಚಿತ್ರವು ಬೆಳಗಾವಿ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದಿದೆ.

ಈ ಸ್ತಬ್ಧಚಿತ್ರವನ್ನು ಸ್ಥಳೀಯ ಕಲಾವಿದರಾದ ರವಿ ಶಿಶ್ವನಹಳ್ಳಿ, ಕಿರಣ ಓದುಗೌಡರ, ಷಹಜಾನ್ ಮುದಕವಿ, ಫಕ್ಕಿರೇಶ ಕುಳಗೇರಿ, ಜಿ.ಕೆ. ಬಡಿಗೇರ, ರವಿ ಬಾದಾಮಿ, ಅರುಣ, ಕೊಟ್ರೇಶ ಮೊದಲಾದವರ ಕೈಚಳಕದಲ್ಲಿ ನಿರ್ಮಿಸಲಾಗಿತ್ತು. ಕಲಾವಿದರ ತಂಡದ ಸೂಕ್ಷ್ಮ ಕೆತ್ತನೆಗಳು ಮತ್ತು ವಿವರಗಳು ದೇವಾಲಯದ ಮೂಲ ಸ್ವರೂಪಕ್ಕೆ ಜೀವ ತುಂಬುವಲ್ಲಿ ಯಶಸ್ವಿಯಾಗಿತ್ತು.

'ಮೆರವಣಿಗೆಯಲ್ಲಿ ಭಾಗವಹಿಸಿ ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದ ಈ ಸ್ತಬ್ಧಚಿತ್ರ, ಜಿಲ್ಲೆಯ ಸಾಂಸ್ಕೃತಿಕ ಹಿರಿಮೆಯನ್ನು ಎತ್ತಿ ಹಿಡಿದಿದೆ. ಈ ಪ್ರದರ್ಶನವು ಗದಗ ಜಿಲ್ಲೆಯ ಪ್ರವಾಸೋದ್ಯಮ ಮತ್ತು ಕಲೆಯನ್ನು ಉತ್ತೇಜಿಸಲು ಸಹಕಾರಿಯಾಗಲಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅಭಿನಂದನೆ ಸಲ್ಲಿಸಿದ್ದಾರೆ.

ಜೋಡು ಕಳಸದ ಸ್ತಬ್ಧಚಿತ್ರವು ಜಿಲ್ಲೆಯ ಪುರಾತನ ಕಲೆ ಮತ್ತು ವಾಸ್ತುಶಿಲ್ಪದ ಶ್ರೀಮಂತಿಕೆ ಅನಾವರಣಗೊಳಿಸಿದೆ. ಜಿಲ್ಲೆಯ ಪ್ರಾಚೀನ ಪರಂಪರೆಯನ್ನು ಬಿಂಬಿಸಿದ ಈ ಸ್ತಬ್ಧಚಿತ್ರವು ಮೆರವಣಿಗೆಯ ಪ್ರಮುಖ ಆಕರ್ಷಣೆಯಾಗಿತ್ತು. ನಿರೀ–ಕ್ಷೆಯಂತೆ ಈ ಬಾರಿ ಪ್ರಶಸ್ತಿ ಪಡೆಯುವಲ್ಲಿ ಯಶಸ್ವಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಪೆಟ್ರೋಲ್ ಬಂಕ್ ಕೆಲಸಗಾರನ ಕೊಲೆಗೆ ಯತ್ನ: ಮೂವರು ಆರೋಪಿಗಳ ಬಂಧನ



**ಕಲಬುರಗಿ:** ನಗರದ ಆಳಂದ ರಸ್ತೆಯ ವಿಶ್ವರಾಧ್ಯಗುಡಿ ಹತ್ತಿರವಿರುವ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ತುಂಬಿಸಿಕೊಳ್ಳುವ ನೆಪದಲ್ಲಿ ಐವರು ಅಲ್ಲಿ ಕೆಲಸ ಮಾಡುತ್ತಿದ್ದ ಯುವಕನೊಂದಿಗೆ ಜಗಳ ತೆಗೆದು ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಬ್–ಅರ್ಬನ್ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ನಗರದ ನ್ಯೂ ರಾಘವೇಂದ್ರ ಕಾಲೋನಿಯ ವಿನೋದ ಅಲಿಯಾಸ್ ಚಾಕಲೇಟ್ ವಿನ್ಯಾ ತಂದೆ ಬಾಪು ಪಾಟೀಲ (18), ಭೂಪಾಲ್ ತೆಗನೂರ ಗ್ರಾಮದ ನಾಗೇಶ್ ತಂದೆ ವಿಠ್ಠಲರಾವ ಕಟ್ಟಿಮನಿ (19), ರಾಮತೀರ್ಥ ನಗರದ ವಿನೋದ ಅಲಿಯಾಸ್ ಟೈಗರ್ ವಿನೋದ ತಂದೆ ತಾಯಪ್ಪ ದಂಡಗುಲೆ (19) ಎಂಬುವವರನ್ನು ಬಂಧಿಸಿ ಕೃತ್ಯ–ಕ್ಕೆ ಉಪಯೋಗಿಸಿದ ಆಯುಧ, 2 ಬೈಕ್ ಜಪ್ತಿ ಮಾಡಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ತಲೆ ಮರೆಸಿಕೊಂಡಿರುವ ಇನ್ನಿಬ್ಬರು ಆರೋಪಿಗಳ ಪತ್ತೆಗೆ ಜಾಲ ಬೀಸಿದ್ದಾರೆ.

ಇತ್ತೀಚೆಗೆ ನಗರದ ಆಳಂದ ರಸ್ತೆಯ ವಿಶ್ವರಾಧ್ಯ ಗುಡಿ ಹತ್ತಿರವಿರುವ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ತುಂಬಿಸಿಕೊಳ್ಳುವ ನೆಪದಲ್ಲಿ ಐವರು ಅಲ್ಲಿ ಕೆಲಸ ಮಾಡುತ್ತಿದ್ದ ಯುವಕನೊಂದಿಗೆ ಜಗಳ ತೆಗೆದು ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದರು. ಈ ಸಂಬಂಧ ಸಬ್–ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಗಳ ಪತ್ತೆಗೆ ಡಿಸಿಪಿಗಳಾದ ಕನಿಕಾ ಸಿಕ್ರಿವಾಲ್, ಪ್ರವೀಣ್ ಹೆಚ್.ನಾಯಕ್ ಅವರ ಮಾರ್ಗದರ್ಶನದಲ್ಲಿ ಸಬ್–ಅರ್ಬನ್ ಉಪ ವಿಭಾಗದ ಎಸಿಪಿ ಡಿ.ಜಿ.ರಾಜಣ್ಣ, ಪಿಐ ಸಂತೋಷ ಎಲ್.ತಟ್ಟೆಪಳ್ಳಿ, ಸಿಸಿಬಿ ಘಟಕದ ಪಿಐ ದಿಲೀಪ್ ಸಾಗರ್ ನೇತೃತ್ವದಲ್ಲಿ ಮತ್ತು ಪಿಎಸ್‌ಐ ಬಸವರಾಜ, ಸಿಬ್ಬಂದಿಗಳಾದ ಭೀಮ ನಾಯಕ, ಮಂಜುನಾಥ, ಅಶೋಕ, ಪ್ರಭಾಕರ, ಶಿವಲಿಂಗ, ಯಲ್ಲಪ್ಪ ಪೂಜಾರಿ ಅವರನ್ನು ಒಳಗೊಂಡ ಪ್ರತ್ಯೇಕ ತಂಡಗಳನ್ನು ರಚಿಸಲಾಗಿತ್ತು. ಈ ತಂಡಗಳು ತನಿಖೆ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಿ ನ್ಯಾಯಾಂಗಬಂಧನಕ್ಕೆಒಪ್ಪಿಸುವಲ್ಲಿಯಶಸ್ವಿಯಾಗಿವೆ. ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ಶ್ಲಾಘಿಸಿದ್ದಾರೆ.

# ವಿಶ್ವಕೌಶಲ್ಯ ರಾಜ್ಯಮಟ್ಟ ಸ್ಪರ್ಧೆಯಲ್ಲಿ ಆಯ್ಕೆ



**ಕಲಬುರಗಿ :** ಕೌಶಲ್ಯಾಭಿವೃದ್ಧಿ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಕಲಬುರಗಿಯ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ,(ಜಿಟಿಟಿಸಿ) ದಲ್ಲಿ 5ನೇ ಸೇಮಸ್ಟರನಲ್ಲಿ ತರಬೇತಿ ಪಡೆಯುತ್ತಿರುವ ಅಂಕಿತಾ ಅಳಂದ ಅವರು ವಿಶ್ವಕೌಶಲ್ಯ (ಮೆಕಾನಿಕಲ್ ಕ್ಯಾಡ್) ರಾಜ್ಯಮಟ್ಟ ಸ್ಪರ್ಧೆಯಲ್ಲಿ ಆಯ್ಕೆಯಾಗಿದ್ದಾರೆ.

ಅಂಕಿತಾ ಅಳಂದ ಅವರ ಯಶಸ್ಸು ಮತ್ತು ರಾಜ್ಯ ಮಟ್ಟದ ಸಾಧನೆಗಾಗಿ ಜಿಟಿಟಿಸಿ ಕಾಲೇಜಿನ ಪ್ರಾಂಶುಪಾಲರಾದ ಸುಧಾರಾಣಿ ಎಸ್ ಅಟ್ಟೂರ್, ಅಫಜಲಪುರ್‌ಸರ್ಕಾರಿ ಪಾಲಿಟೆಕ್ನಿಕ್ ಪ್ರಾಂಶುಪಾಲ ಡಾ.ಪ್ರಭುದೇವ ಎಮ್.ಎಸ್, ತರಬೇತಿದಾರ ಅರುಣ ಸೂರ್ಯವಂಶಿ, ಮತ್ತು ಕಾಲೇಜಿನ ಎಲ್ಲ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State